# ಶಿಕಾರಿ ಪರಂಪರೆ

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ತ್ಯಗಳ ಸದ್ಬಳಕೆಯ ಮೂಲಕ ಅವರ ಅಂತಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನದ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಾಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅನ್ತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಮಹತ್ವದ ಲೇಖಕರನ್ನು, ಕಲಾವಿದರನ್ನು, ವಿಜ್ಞಾನಿಗಳನ್ನು ಹಾಗೂ ಸಾಹಿತ್ಯ ಮತ್ತು ಸಾಹಿತ್ಯೇತರವಾದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಜನರಿಗೆ ತಿಳುವಳಿಕೆ ನೀಡಲು ಪ್ರಸಾರೋಪನ್ಯಾಸಗಳನ್ನು

ಮಾಡಿಸುವ ಯೋಜನೆಯನ್ನು ರೂಪಿಸಿಕೊಂಡು ಅದರಂತೆ ಕಾರ್ಯನಿರ್ವಹಿಸುತ್ತಿದೆ. ಅತ್ಯಂತ ಸರಳವಾಗಿ ಈ ವಿಷಯಗಳನ್ನು ಕುರಿತು ಪರಿಚಯ ಮಾಡಿಕೊಡುವ ಈ ಉಪನ್ಯಾಸಗಳನ್ನು ಪುಸ್ತಕಗಳ ಮೂಲಕವಾಗಿ ಪ್ರಕಟಿಸುತ್ತಿದೆ. ಈ ಉಪನ್ಯಾಸ ಮಾಲೆ ಮತ್ತು ಅದರ ಉತ್ಪನ್ನಗಳಾದ ಈ ಚಿಕ್ಕ ಹೊತ್ತಿಗೆಗಳು ತುಂಬ ಜನಪ್ರಿಯವಾಗಿವೆ. ಈ ಮಾಲೆಯಲ್ಲಿ ಪ್ರಸ್ತುತ ಪುಸ್ತಕ ಪ್ರಕಟವಾಗುತ್ತಿದೆ.

'ಶಿಕಾರಿ ಪರಂಪರೆ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಡಾ. ಸ.ಚಿ. ರಮೇಶ್ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಯವರು

## (೧)

**'ಬೇಟೆ'** ಎಂಬ ಪದ ಮೂಲದ್ರಾವಿಡ ಪದದಿಂದ ನಿಷ್ಪತ್ತಿಗೊಂಡಿದೆ. ತಮಿಳಿನಲ್ಲಿ ವೇಟ್ಟೆ, ವೇಟೆ, ವೇಡು ಎಂತಲೂ, ಮಲಯಾಳದಲ್ಲಿ ವೇಟ್ಟೈಯಂತಲೂ, ತುಳುವಿನಲ್ಲಿ ಬೋಣ್ಟೆ ಅಥವಾ ಬೋಂಟೆಯಂತಲೂ, ತೆಲುಗಿನಲ್ಲಿ ಏಟೆ, ವೇಟೆ ಎಂಬ ರೂಪಗಳನ್ನು ಪಂಚ ದ್ರಾವಿಡ ಭಾಷೆಗಳಲ್ಲಿ ಕಾಣಬಹುದು.

ಬೇಟೆ ಉಳಿದುಕೊಂಡು ಬಂದಿರುವುದನ್ನು ಪ್ರಮುಖವಾಗಿ ಐದು ಹಂತಗಳಲ್ಲಿ ಗುರುತಿಸಬಹುದು. ಅವುಗಳೆಂದರೆ ೧. ಆಹಾರೋತ್ಪಾದನೆ ೨. ಪೈರು ಹಾಗೂ ದನಕರುಗಳ ರಕ್ಷಣೆ ೩. ಚರ್ಮ, ಕೊಂಬು ಇತ್ಯಾದಿ ವಸ್ತುಗಳ ಸಂಗ್ರಹಣೆ ೪. ಪ್ರತಿಷ್ಠೆ, ಕೀರ್ತಿಯನ್ನು ಮೆರೆಯಲು ೫. ಆಚರಣೆಗಳಲ್ಲಿ ಬೇಟೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಪೂರ್ವಕಾಲದಲ್ಲಿನ ಬೇಟೆಯ ಸಂಪ್ರದಾಯ ಹಾಗೂ ಕ್ರಮಗಳು ಕಾಲದ ಗಡಣದೊಳಗೆ ಬೆಂದು ತಲೆಮಾರಿನಿಂದ ತಲೆಮಾರಿಗೆ ಸಾಗಿ, ಅಂದು ಪ್ರವೃತ್ತಿಯಾಗಿದ್ದು, ವೃತ್ತಿಯಾಗಿ ವಿಕಾಸ ಹೊಂದಿದೆ. ಬುದ್ಧಿಶಾಲಿಯಾದ ಮನುಷ್ಯ ಬೇಟೆಯಲ್ಲಿ ತನ್ನ ಅನುಭವದ ಮೇಲೆ ಹೊಸ ಹೊಸ ಕ್ರಮಗಳನ್ನು ಆವಿಷ್ಕಾರ ಮಾಡಿಕೊಂಡನು. ಅಂದು ಕೇವಲ ಬೇಟೆಯ ಪ್ರವೃತ್ತಿ, ವ್ಯಕ್ತಿ ನೆಲೆಯಲ್ಲಿದ್ದುದು ಸಮೂಹದ ಸಂಸ್ಕೃತಿಯಾಗಿ ಮಾರ್ಪಟ್ಟಿತು.

ನಮ್ಮ ನಾಗರಿಕತೆಯ ವಿಕಾಸದ ಹಂತಗಳನ್ನು ವಿಭಿನ್ನ ನೆಲೆಗಳಲ್ಲಿ ಅರ್ಥಮಾಡಿಕೊಳ್ಳಲು ಬೇಟೆ ಹಾಗೂ ಅದರ ವಿಧಾನಗಳ ಚಿಂತನೆಯನ್ನು ಸಾಧ್ಯವಿದೆ. ಈ ಬಗೆಗೆ ಚಿಂತಿಸುವ ನಮಗೆ ಅದರ ಪೂರ್ಣ ಪ್ರಮಾಣದ ಅನನುಕೂಲಗಳು, ಅದು ಪರಿಸರದ ಮೇಲೆ ನಡೆಸುವ ಕ್ರೌರ್ಯ ಇತ್ಯಾದಿಗಳ ಬಗೆಗೆ ಚೆನ್ನಾಗಿ ತಿಳಿದಿರಬೇಕು. ಮರೆಯಾಗುತ್ತಿರುವ ಬೇಟೆಯ ಸಂಸ್ಕೃತಿಯನ್ನು ಪೂರ್ವರೂಪದಲ್ಲಿ ನೋಡಿ ಆ ಮೂಲಕ ಅಂದಿನ ಜನರ ತಿಳುವಳಿಕೆಗಳನ್ನು ಅರ್ಥ ಮಾಡಿಕೊಳ್ಳುವುದು ಈ ಲೇಖನದ ಉದ್ದೇಶಗಳ್ಲೊಂದು. ಬೇಟೆ ಅಮಾನವೀಯವಾದದ್ದು. ಉದಾಹರಣೆಗೆ ಜಗತ್ತಿನ ಅದ್ಭುತಗಳೊಂದಾದ ತಾಜ್‌ಮಹಲ್ ಅಪ್ಪಳಿಸಿದರೆ ಅದನ್ನು ಹಾಗೆಯೇ ಮತ್ತೆ ಕಟ್ಟಬಹುದು. ಅನೇಕ ಶಿಲಾವಿಗ್ರಹಗಳನ್ನು ಅನೇಕ ಗೊಮ್ಮಟರನ್ನು ಕೆತ್ತಿಸಬಹುದು. ಆದರೆ ಅವಸಾನದ ಅಂಚಿನಲ್ಲಿರುವ ಸಿಂಹ, ಹುಲಿ, ಚಿರತೆ, ಆನೆ - ಮುಂತಾದ ಜೀವಿಗಳ ಸಂತತಿಯನ್ನು ಬೆಳೆಸುವುದು ಸಾಧ್ಯವಾಗುವುದಿಲ್ಲ. ಯಾವ ಜೀವಿಯನ್ನು ಸೃಷ್ಟಿಸಲು ಸಾಧ್ಯವಿಲ್ಲವೋ ಅದನ್ನು ಬೇಟೆಯಾಡುವ, ಕೊಲ್ಲುವ ಹಕ್ಕು ಇರುವುದಿಲ್ಲ. ನಮ್ಮೆಲ್ಲರ ಬದುಕು ಪರಿಸರದ ಮೇಲೆ ನಿಂತಿದೆ. ಅದರ ರಕ್ಷಣೆ ನಮ್ಮ ರಕ್ಷಣೆ ಎಂದು ಬೇರೆ ಹೇಳಬೇಕಾಗಿಲ್ಲ. ಈ ಕಾರಣದಿಂದ ನೆಲ, ಜಲ ಹಾಗೂ ವನ್ಯಮೃಗ ಪಕ್ಷಿಗಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಬೇಕು.

ಬೇಟೆ ಜನಪದ ಜೀವನಕ್ಕೆ ಹೊಂದಿಕೊಂಡು ಬಂದ ಸಹಜ ಕ್ರಿಯೆ. ಇದು ವೀರ, ಭಯಾನಕ, ರೌದ್ರ, ಬೀಭತ್ಸ, ಹಾಸ್ಯ ಮೊದಲಾದ ನವರಸಗಳಿಗೆ ಸಾಕಷ್ಟು ಅವಕಾಶವನ್ನು ನೀಡುವ ರೋಚಕ ಪ್ರಸಂಗ. ಬೇಟೆಯಿಂದ ಯಾವಾಗಲೂ ಪ್ರಬಲವರ್ಗ ಜಯಿಸುತ್ತದೆ.

ದುರ್ಬಲ ವರ್ಗ ಸೋತು, ಸಾಯುತ್ತದೆ. ಆಹಾರವಾಗುತ್ತದೆ. 'ಬಲವಿದ್ದವುಗಳ ಬದುಕು' ಎನ್ನುವ ಪ್ರಕೃತಿ ನಿಯಮದಡಿ ಸಾಗುತ್ತದೆ. ಬೇಟೆಯ ಈ ಕ್ರಿಯೆ ಜೀವಜಗತ್ತಿನ ಎಲ್ಲಾ ಜಲಚರ, ಕ್ರಿಮಿ ಕೀಟ, ಪಕ್ಷಿಗಳಿಂದ ಹಿಡಿದು ಕಾಡಿನ ಪ್ರಾಣಿಗಳಿಂದ ಬೆಳೆದು ಮಾನವನವರೆಗೂ ಚಾಚಿಕೊಂಡಿದೆ.

ಕನ್ನಡ ಕಾವ್ಯಗಳಲ್ಲಿ ಬರುವ ಅಷ್ಟಾದಶ ವರ್ಣನೆಗಳಲ್ಲಿ ಮನರಂಜನೆ ಪ್ರಮುಖ ಸ್ಥಾನ ಪಡೆದಿದೆ. ಮೊದಲು ಬದುಕಿಗೆ ಅನಿವಾರ್ಯವಾಗಿದ್ದ ಬೇಟೆ ಕ್ರಮೇಣ ರೂಢಿಯಾಗಿ, ಕ್ರೀಡೆಯಾಗಿ, ಯುದ್ಧ ಕಲೆಯಾಗಿ, ಮನೋರಂಜನೆಯಾಗಿ, ಜೀವನಾಧಾರವಾಗಿ, ಮೃಗಯಾ ವಿನೋದವಾಗಿ, ಪ್ರಾಚೀನ ಸಾಹಿತ್ಯ ವಸ್ತು ವಿಷಯವಾಗಿ ವಿವಿಧ ಆಯಾಮ ಪಡೆಯಿತು. ಪಂಪ ಭಾರತದ ಅರ್ಜುನ, ಹರಿಶ್ಚಂದ್ರ ಕಾವ್ಯದ ಹರಿಶ್ಚಂದ್ರರನ್ನು ಇಲ್ಲಿ ಉದಾಹರಿಸಬಹುದು. ಬೇಟೆ ಎಂಬುದು ಕೇವಲ ಜೂಜು, ಬೇಟೆ, ಮಧ್ಯಪಾನಗಳಂತೆ ವ್ಯಸನ ಎಂಬುದು ಸರಿಯಲ್ಲ. ಬೇಟೆಯಿಂದ ಬೇಟೆಗಾರನಿಗೆ ಹಲವಾರು ಪ್ರಯೋಜಗಳಿದ್ದವು. ಈ ಕಾರಣದಿಂದಲೇ ಪಂಪನು ಬೇಟೆಯನ್ನು ವಿನೋದಗಳ ರಾಜ ಎಂದು ಕರೆದಿದ್ದಾನೆ. ಇದಕ್ಕೆ ಮಹಾಕವಿ ಕಾಳಿದಾಸನ ಪ್ರಭಾವ ನಿಚ್ಚಳವಾಗಿ ಪ್ರಭಾವ ಬೀರಿದೆ. ಅಭಿಜ್ಞಾನ ಶಾಕುಂತಲದಲ್ಲಿ ಕಾಳಿದಾಸನು ಬೇಟೆಯ ಕುರಿತು ರಚಿಸಿದ ಮನೋಹರವಾದ ಪದ್ಯವೊಂದು ಹೀಗಿದೆ.

*ಮೇದಶ್ಛೇದ ಕೃಶೋದರಂ ಲಘುಭವತ್ಯುತ್ಥಾನ ಯೋಗ್ಯಂವಪುಃ*
*ಸತ್ವಾನಾಮಪಿ ಲಕ್ಷ್ಯ ತೇ ವಿಕೃತಿ ಮಚ್ಚಿತ್ತಂ ಭಯ ಕ್ರೋಧಯೋಃ*
*ಉತ್ಕರ್ಷಃ ಸಚ ಧನ್ವಿನಾಂಯದಿಷವಃ ಸಿಧ್ಯ ಂತಿ ಲಕ್ಷ್ಯೇ ಚಲೇ*
*ಮಿಥ್ಯೈವ ವ್ಯಸನಂ ವದಂತಿ ಮೃಗಯಾ ಮೀದೃಗ್ವಿನೋದಃ ಕುತಃ*

ಬೊಜ್ಜು ಕರಗಿ ಹೋಗುತ್ತದೆ. ಹೊಟ್ಟೆ ಕಿರಿದಾಗುತ್ತದೆ. ಶರೀರ ಚುರುಕುಗೊಂಡು ಲಘುವಾಗುತ್ತದೆ. ಹೆದರಿಕೆಯಲ್ಲಿ ಅಥವಾ ಸಿಟ್ಟಿನಲ್ಲಿ ಜಂತುಗಳು ವಿಕಾರವಶವಾದ ಚಿತ್ತ ಹೇಗಿರುತ್ತದೆಂದು ಅರಿವಾಗುತ್ತದೆ. ಚಲಿಸುತ್ತಿರುವ ಸಮಯದಲ್ಲಿ ಕೂಡಾ ಬಾಣಗಳು ಸರಿಯಾಗಿ ಲಕ್ಷ್ಯಕ್ಕೆ ನಾಟುವಂತೆ ಸಿದ್ಧಿ ದೊರಕುತ್ತದೆ ಎಂಬುದು ಬಿಲ್ಲುಗಾರರಿಗೆ ಬಲ್ಮೆಯಾಗಿದೆ. ಇಷ್ಟೆಲ್ಲಾ ಗುಣ ವಿಶೇಷಗಳಿದ್ದರೂ ಬೇಟೆಯನ್ನು ವ್ಯಸನಗಳಲ್ಲಿ ಒಂದು ಎನ್ನುವುದು ಕೇವಲ ಸುಳ್ಳೇ ಆಗಿದೆ. ಬೇಟೆಯಂತಹ ವಿನೋದ ಇನ್ನೆಲ್ಲಿದೆ? ಇದು ಮೇಲಿನ ಪದ್ಯದ ಅರ್ಥ.

ಮಹಾಕವಿ ಪಂಪ ಬೇಟೆಯಿಂದ ದೊರೆಯುವ ಪ್ರಯೋಜನಗಳನ್ನು ಕುರಿತು ಬರೆದ ಪದ್ಯ ಹೀಗಿದೆ.

*"ಪಸಿವು ದೊರೆಕೊಳ್ಗುಮಣಿಸುಗಳಿಕೆಯ್ಗು ಮಾವಂದದೊಳ್ ಕನಲ್ದಾದ ಮೆಯ್ಗೆ*
*ನಸಿಯನಾಗಿಪುದುಳಿದುವಪ್ಪುವು ಬಗೆಗೊಳಲಪ್ಪುದು ಮೃಗದ ಮೆಯ್ಯೊಳ್*
*ನಿಸದ ಮೆಸೆವುದು ಬಲ್ಲಾಳ ಬಿಬ್ಬಲ್ಮೆ ತನ್ನೊ ಳಮಿಸುತೆ ಲೇಸಪ್ಪುದು*
*ಬಸದ ಮೆಂದಱಿಯದೆಳಿಸುವರ್ ಬೇಂಟೆಯಂ ಬೇಂಟೆಯ ಬಿನದಂಗಳಸಲ್ತೆ"*

ಪ್ರಾದಿಮ ಕಾಲದಲ್ಲಿ ಬೇಟೆಯು ಎರಡು ಮುಖ್ಯ ಕಾರಣಗಳಿಗಾಗಿ ಪ್ರಮುಖವಾಗಿತ್ತು. ಅವುಗಳನ್ನು ಆಹಾರೋತ್ಪಾದನೆ ಹಾಗೂ ರಕ್ಷಣೆ ಎಂದು ಗುರುತಿಸಬಹುದು. ಹುಟ್ಟು ಬೇಟೆಗಾರನಾದ ಮಾನವ ಆದಿಯಲ್ಲಿ ಒಂಟಿಯಾಗಿ ಅರಣ್ಯ ಪ್ರದೇಶದಲ್ಲಿ ಅಲೆದಲೆದು ಗೆಡ್ಡೆ ಗೆಣಸು ಹಾಗೂ ಕೈಗೆ ಸಿಕ್ಕ ವಸ್ತು, ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಹಸಿವನ್ನು ನೀಗಿಸಿಕೊಳ್ಳುತ್ತಿದ್ದನೆಂದು ಸಂಶೋಧನೆಯಿಂದ ತಿಳಿದು ಬರುತ್ತದೆ. ಸಸ್ಯಾಹಾರ, ಮಾಂಸಾಹಾರ, ಅಹಿಂದೆ, ಹಿಂಸೆ, ಇವುಗಳ ಪರಿಕಲ್ಪನೆ ಹಾಗೂ ವ್ಯತ್ಯಾಸ ಆ ಕಾಲಘಟ್ಟದಲ್ಲಿ ಆತನ ಮನೋಪಟದಲ್ಲಿರಲಿಲ್ಲ. ಆಗ ಆತನಿಗೆ ಬೇಟೆ ಕೇವಲ ಅನಿವಾರ್ಯವಾದ ಆಹಾರೋತ್ಪಾದನೆ ಹಾಗೂ ತನ್ನ ರಕ್ಷಣೆಯ ಮಾರ್ಗವಾಗಿತ್ತು. ಆತನ ಬದುಕು ಜೀವಿಸುವುದಕ್ಕಾಗಿ ಆಹಾರ ಎನ್ನುವ ತತ್ವದ ಆಧಾರದ ಮೇಲೆ ಸಾಗುತ್ತಿತ್ತು.

ಕಾಡುಗಳಲ್ಲಿ ಪ್ರಾಣಿಗಳ ಜೊತೆಗೆ ಪ್ರಾಣಿಯಾಗಿ ಜೀವಿಸುವ ಆತನಿಗೆ ಪ್ರಾಣಿಗಳಿಂದ ರಕ್ಷಿಸಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು. ಮರದ ಪೊಟರೆ, ಬಂಡೆಗಳ ಕೆಳಗೆ, ಗುಹೆಗಳನ್ನು ವಾಸದ ನೆಲೆಯಾಗಿಸಿಕೊಂಡಿದ್ದ. ಒಂದು ಪರಿಮಿತ ಭದ್ರತೆ ಯನ್ನು

ಒದಗಿಸುತ್ತಿದ್ದ ಆತನ ವಸತಿಗಳು ಕಾಡುಪ್ರಣಿಗಳಿಂದ ಪೂರ್ಣ ಪ್ರಮಾಣದ ರಕ್ಷಣೆಗೆ ಅನರ್ಹವಾಗಿದ್ದವು. "ಪರಿಮಿತ ಭದ್ರತೆಗಳಿರುವ ಗುಹೆ, ಗುಡಿಸಲುಗಳಂತಹ ವಸತಿಗಳಲ್ಲಿ ವಾಸಿಸುತ್ತಿದ್ದ ಆತನು ಕಾಡು ಮೃಗಗಳಿಂದ ತನ್ನ ಜೀವ ರಕ್ಷಣೆಗಾಗಿ ಅವುಗಳನ್ನು ಬೇಟೆಯಾಡುವ ಅನಿವಾರ್ಯತೆಗೆ ಒಳಗಾಗಿರಬೇಕು. ಈ ರೀತಿ ಬೇಟೆಯಾಡಿ ಕೊಂದ ಎಲ್ಲ ಪ್ರಾಣಿಗಳ ಮಾಂಸವನ್ನು ಆತನು ರುಚಿ ನೋಡಿರಲೂ ಸಾಕು. ಅವುಗಳ ಪೈಕಿ ನಾಲಗೆಗೆ ಒಗ್ಗಿದ, ಹೊಟ್ಟೆಗೆ ಪಥವ್ಯೆನಿಸಿದ ಪ್ರಾಣಿಗಳ ಮಾಂಸ ಮಾತ್ರ ಆಹಾರಕ್ಕೆ ಯೋಗ್ಯವಾಗಿ ಮುಂದುವರೆದಿರಬಹುದು" (ವಿವೇಕ ರೈ ಬಿ.ಎ. ೧೯೯೪ - ೨೪೧) ಮೊದಲು ರಕ್ಷಣೆಯ ನೆಪದಲ್ಲಿ ಆರಂಭವಾದ ಬೇಟೆ ಹಸಿವನ್ನು ನೀಗುವ ಸಾಧನವಾಯಿತು. "Hunting is one of the oldest methods of obtaining food" (M.S.E. Vol.No.೯. ೧೯೯೦ - P – ೧೪೭). ಆತನಿಗೆ ಹಸಿವಿನ ನಿವಾರಣೆ ಹಾಗೂ ರಕ್ಷಣೆಗಳೆರಡೂ ಮೂಲ ಮಂತ್ರವಾಗಿದ್ದವು. ಹೀಗಾಗಿ ಆತ ಆಹಾರದ ಸಂಗ್ರಹದ ಗೊಡವೆಗೆ ಹೋಗಲಿಲ್ಲ. ಹೋಗಲಿಲ್ಲ ಎನ್ನುವುದಕ್ಕಿಂತ ಅದು ಆತನಿಗೆ ತಿಳಿದಿರಲಿಲ್ಲ ಎನ್ನುವುದೇ ಸತ್ಯಕ್ಕೆ ಹತ್ತಿರವಾದ ಸಂಗತಿ. ಹಸಿವೆಯನ್ನು ನೀಗಿಸಿಕೊಳ್ಳುವುದು ಆತನಿಗೆ ಬಹಳ ಪ್ರಯಾಸದ ಕೆಲವೇ ಆಗಿತ್ತು. ಅದನ್ನು ತಕ್ಷಣದಲ್ಲಿ ಪಡೆದುಕೊಳ್ಳಲು ಸಾಧ್ಯವಿರಲಿಲ್ಲ. ಅದನ್ನು ಪಡೆದುಕೊಳ್ಳಲು ಅನಿವಾರ್ಯವಾಗಿ ಸಾಹಸ ಪಡಬೇಕಾಯಿತು. ಅದೇ ಅವನಿಗೆ ಬೇಟೆಯೆಂಬುದನ್ನು ಕಲಿಸಿತು. ಅದರಲ್ಲಿಯೇ ಹೆಚ್ಚು ಅವಲಂಬಿತನಾದನು. ಸುತ್ತಲಿನ ಪ್ರಕೃತಿ ಅವನಿಗೆ ಇನ್ನೂ ಹೆಚ್ಚಿನ ಬೇಟೆಯ ವಿಧಾನವನ್ನು ಕಲಿಸಿಕೊಟ್ಟಿತು. ಉದಾ: ಜೇಡವು ಬಲೆಯ ಮೂಲಕ ಬೇಟೆಮಾಡುವುದು, ಹಲ್ಲಿ, ಹಾವುಗಳು ಹೊಂಚು ಹಾಕಿ ಬೇಟೆಯಾಡುವುದು, ಮಿಂಚೊಳ್ಳಿ ನೀರಿಗೆ ಧುಮುಕಿ ತನ್ನ ಕೊಕ್ಕಿನಿಂದ ಮೀನು ಹಿಡಿಯುವುದು, ಹುಲಿ ಚಿರತೆಗಳು ಹೊಂಚು ಹಾಕಿ ಬೇಟೆಯಾಡುವುದು, ತೋಳ, ಕಾಡುನಾಯಿಗಳು ಗುಂಪುಗೂಡಿ ಬೇಟೆಯಾಡುವುದು ಇನ್ನೂ ಮುಂತಾದವುಗಳು. ಹೀಗೆ ಪ್ರಾಣಿಗಳನ್ನು ವಿಭಿನ್ನ ರೀತಿಯಲ್ಲಿ ಬೇಟೆಯಾಡತೊಡಗಿದನು. ಬೇಟೆ ದಿನದಿಂದ ದಿನಕ್ಕೆ ಹೆಚ್ಚು ಸುಲಭವಾಗುತ್ತಾ ಹೋಯಿತು.

ಬೇಟೆಯು ಆಹಾರೋತ್ಪಾದನೆ ಮತ್ತು ರಕ್ಷಣೆಯ ಜೊತೆಗೆ ಆತನ ಬುದ್ಧಿ ವಿಕಾಸದಲ್ಲಿ ಬಹು ಮಹತ್ತರ ಪಾತ್ರ ವಹಿಸಿದೆ. ಪೂರ್ವಕಾಲದಲ್ಲಿ ಆದಿ ಮಾನವನು ಸಸ್ಯಾಹಾರದ ಜೊತೆಗೆ ತನ್ನ ಸುತ್ತಲಿನ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವ ಮಾಂಸಾಹಾರಿಯಾಗಿರುವುದೇ ಅವನಿಗೆ ವರವಾಗಿ ಪರಿಣಮಿಸಿತೆಂದು ಹೇಳಬೇಕು. ಬೇಟೆಯ ಕ್ರಿಯೆ ಮಾಂಸವನ್ನು ಒದಗಿಸುವುದರ ಜೊತೆಗೆ ಅವನ ವಿಕಾಸಕ್ಕೆ ಕಾರಣವಾಯಿತು. ಸದ್ಯದ ಪರಿಸ್ಥಿತಿಯಲ್ಲಿ ಅಮಾನವೀಯವೂ, ಕ್ರೂರವು ಆಗಿ ಕಂಡುಬರುವ ಬೇಟೆ ಮಾನವನ ದೈಹಿಕ ಹಾಗೂ ಬೌದ್ಧಿಕ ವಿಕಾಸದಲ್ಲಿ ವಹಿಸಿದ ಪಾತ್ರವನ್ನು ಮರೆಯುವಂತಿಲ್ಲ. ಆತ ಬೇಟೆಗೆ ವ್ಯೂಹ ರಚಿಸಿದಾಗ ಅನಿವಾರ್ಯವಾಗಿ ಬೇಟೆಯ ಪ್ರಾಣಿಯ ಬಗೆಗೆ ಚಿಂತಿಸಬೇಕಾಗಿತ್ತು. ಬೇಟೆಯಾಡಬೇಕಾದ ಪ್ರಾಣಿಯ ಚಲನವಲನ ಗಮನಿಸುವುದು. ಅದರ ಅತ್ಯಂತ ದುರ್ಬಲ ಗಳಿಗೆಯನ್ನು ಗುರುತಿಸುವುದು ಹಾಗೂ ಅದರ ಮೇಲೆ ಆಕ್ರಮಣ ಮಾಡುವುದು. ಇಂಥ ಕಾರ್ಯಗಳು ಅವನ ಮೆದುಳಿನ ಬೆಳವಣಿಗೆಯನ್ನು ಚುರುಕುಗೊಳಿಸಿದವು. ಬೇಟೆಯ ಪ್ರಾಣಿ ದೊಡ್ಡದಾಗಿದ್ದರೆ ಒಂದು ಗುಂಪು ಭಾಗಿಯಾಗುವಂತೆ ಪರಿಸ್ಥಿತಿ ಅನಿವಾರ್ಯವಾಗಿ ನಿರ್ಮಾಣವಾಗುತ್ತಿತ್ತು. ಆ ಸಂದರ್ಭದಲ್ಲಿ ಪ್ರತಿಯೊಬ್ಬನು ಒಂದು ಗೊತ್ತಾದ ಕೆಲಸದಲ್ಲಿ ತೊಡಗಲೇಬೇಕಾದ ಅನಿವಾರ್ಯತೆ ಉಂಟಾಗುತ್ತಿತ್ತು. ಇದರಿಂದಾಗಿ ಅವರಲ್ಲಿ ಸಂಘ ಜೀವನ ಹಾಗೂ ಸಹಕಾರಿ ಮನೋಭಾವ ಬೆಳೆಯಲು ಅನುಕೂಲವಾಯಿತು.

ಮಾನವ ತನ್ನ ವಿಕಾಸದ ಹಂತದಲ್ಲಿ ಸಸ್ಯಾಹಾರವನ್ನು ಪ್ರಮುಖ ಆಹಾರವಾಗಿ ಉಪಯೋಗಿಸಲು ಆರಂಭಿಸಿದನು. ಈ ಹಂತದಲ್ಲಿ ಆತನು ದೈಹಿಕವಾಗಿಯೂ ಬದಲಾವಣೆ ಹೊಂದಿದ. ದೈಹಿಕ ರಕ್ಷಣಾಸ್ತ್ರಗಳಾದ ಉಗುರು, ಕೋರೆಹಲ್ಲು ಇತ್ಯಾದಿಗಳನ್ನು ಕಳೆದುಕೊಂಡನು. ಹೇಗೆಂದರೆ ಕೋರೆ ಹಲ್ಲುಗಳು ಆಹಾರವನ್ನು ಅಗಿಯಲು ತೊಂದರೆ ಕೊಡುತ್ತಿದ್ದವು. ಈ ಕಾರಣದಿಂದ ಕೋರೆ ಹಲ್ಲುಗಳಿಗೆ ಕೆಲಸವಿಲ್ಲದೇ ಕ್ರಮೇಣ ಕ್ಷೀಣಿಸಿದವು. ಉಗುರುಗಳು ಕ್ಷೀಣಿಸಿ ಅದರ ಬದಲು ಬೆರಳುಗಳು ಉಪಯೋಗಕ್ಕೆ ಬಂದವು. ಹಲ್ಲು ಮತ್ತು ಉಗುರುಗಳನ್ನು ಕಳೆದುಕೊಂಡ ಅವನಿಗೆ ತನ್ನ ಹಾಗೂ ತನ್ನವರನ್ನು ರಕ್ಷಣೆ ಮಾಡಿಕೊಳ್ಳುವ ಜವಾಬ್ದಾರಿ ಬೀಳುತ್ತದೆ. ಇದೆಲ್ಲವು ಮೆದುಳಿನ ಮೇಲೆ ಹೆಚ್ಚು ಒತ್ತಡವನ್ನುಂಟುಮಾಡುವಂತೆ ಮಾಡಿದಾಗ ಮಾನವ ಸಹಜವಾಗಿ ಇತರ ಪ್ರಾಣಿಗಳಿಗಿಂತ ಭಿನ್ನನು, ಬುದ್ಧಿವಂತನು ಚಾಣಾಕ್ಷನೂ ಆಗಲು ಕಾರಣವಾಯಿತು. ಈ ಹಂತದಲ್ಲಿ ಅಂದರೆ ಮೆದುಳಿನ ವಿಕಾಸದ ಹಂತದಲ್ಲಿ ಬೇಟೆಯ ಪಾತ್ರವನ್ನು ಮರೆಯುವಂತಿಲ್ಲ.

ಪ್ರಾಣಿಗಳ ಜೊತೆಗೆ ಪ್ರಾಣಿಯಾಗಿ ಬದುಕುತ್ತಿದ್ದ ಮನುಷ್ಯ ತನ್ನ ರಕ್ಷಣೆಯನ್ನು ಕೋರೆಹಲ್ಲುಗಳಿಂದಲೂ ಮತ್ತು ಉದ್ದನೆಯ ಉಗುರುಗಳಿಂದ ಮಾಡಿಕೊಳ್ಳುತ್ತಿದ್ದ. ತನ್ನ ಶರೀರದ ಕೆಲವು ಅಂಗಾಂಗಳು ಅಗತ್ಯಕ್ಕೆ ತಕ್ಕ ಹಾಗೆ ಹೆಚ್ಚು ಒತ್ತು ಕೊಟ್ಟಾಗ, ಅನಗತ್ಯವಾದ ಅಂಗಗಳು ನಿರುಪದ್ರವಿಯಾದವು. ದೈಹಿಕ ರಕ್ಷಣೆಯ ಅಂಗಭಾಗಗಳನ್ನು ಕಳೆದುಕೊಂಡ ನರ ವಾನರನಿಗೆ ತನ್ನ ಆತ್ಮರಕ್ಷಣೆಗೆ ಇದ್ದ ಪ್ರಮುಖ ಅಸ್ತ್ರ ಎಂದರೆ ಚುರುಕು ಬುದ್ಧಿ, ಬುದ್ಧಿಯ ಮೇಲೆ ಹೆಚ್ಚು ಹೆಚ್ಚು ಅವಲಂಬಿಸುತ್ತಾ ಹೋದಂತೆ ಮೆದುಳಿನ ವಿಕಾಸದ ವೇಗ ಹೆಚ್ಚುತ್ತಾ ಹೋಯಿತು. ಆಗ ರಕ್ಷಣೆಗೆ ಸುತ್ತಮುತ್ತ ಬಿದ್ದಿರುವ ಕೋಲು, ಕಲ್ಲುಗಳನ್ನೇ ಬಲಸಲು ಕಲಿತನು. ಇದು ಬೇಟೆಯನ್ನು ದಕ್ಕಿಸಿಕೊಳ್ಳಲು ಸಹಾಯವೂ ಹಾಗೂ ಸುಲಭವೂ ಅಯಿತು.

ಶಿಲಾಯುಗದ ಮಾನವನು ವಿವಿಧ ರೂಪದ ಆಯುಧಾಳನ್ನು ಕಲ್ಲಿನಿಂದ ತಯಾರಿಸಿ ಕೊಂಡು ಅದರಿಂದ ಬೇಟೆಯಾಡಿ ಹಸಿ-ಹಸಿ ಮಾಂಸವನ್ನೇ ತಿಂದು ಜೀವನ ಸಾಗಿಸುತ್ತಿದ್ದನು. ಅವನಿಗೆ ಬೇಟೆಯ ಪ್ರಮುಖ ಆಹಾರೋತ್ಪಾದನೆ ಸಾಧನವಾಗುವುದರ ಜೊತೆಗೆ ಉಡುಗೆ ಹಾಗೂ ಆಭರಣ ಸಲಕರಣೆಯನ್ನು ಒದಗಿಸಿತು. “To early man, hunting was a necessity. His quarry provided not only food from the meat but clothing from the skins, and material for tools from the bones. horns and hooves. Both archaeological evidence from the past and observation of simpler societies of the present show widespread preoccupation with, and ingenuity in, methods of hunting. These varied, and vary, with the nature of the terrain, the animal hunted, the ingenuity and inventiveness of the hunters, and the materials and technologies at their disposal”. (Encyclopaedia Britannica Vol-No-6. 1992-159) ಈವರೆಗೆ ಕೇವಲ ಆಹಾರೋತ್ಪಾದನ ಸಾಧನವಾಗಿದ್ದ ಬೇಟೆ ತನ್ನ ವ್ಯಾಪ್ತಿಯನ್ನು ವಿಸ್ತರಿಕೊಂಡು ಚರ್ಮದ ಹೊದಿಕೆ, ಉಪಕರಣ, ಆಭರಣ ಇತ್ಯಾದಿ ನಿತ್ಯೋಪಯೋಗಿ ವಸ್ತುಗಳನ್ನು ಒದಗಿಸಿತು. ದೈಹಿಕವಾಗಿ ದುರ್ಬಲವಾಗಿದ್ದರೂ ಬುದ್ಧಿಮತ್ತೆಯಲ್ಲಿ ಮಾತಾಡುವ ಶಕ್ತಿಯುಳ್ಳವನಾಗಿ ಉಳಿದ ಪ್ರಾಣಿಗಳಿಗಿಂತ ಬುದ್ಧಿವಂತನಾಗಿ, ಶಿಲಾಯುಗದಿಂದ ಲೋಹಯುಗಕ್ಕೆ ಕಾಲಿರಿಸಿದನು. ಬೇಟೆಗೆ ಕಬ್ಬಿಣದಿಂದ ತಯಾರಿಸಿದ ಕೊಡಲಿ, ಈಟಿ, ಖಡ್ಗಗಳನ್ನು ಬಳಸಲು ಆರಂಭಿಸಿದನು. ಈ ಹೊತ್ತಿಗಾಗಲೇ ಆತ ಬೆಂಕಿಯ ಉಪಯೋಗವನ್ನು, ಬಳಕೆಯನ್ನು ಕಂಡಿಕೊಂಡಿದ್ದರಿಂದ ಮಾಂಸವನ್ನು ರುಚಿಗಾಗಿ ಅರೆ ಬರೆ ಸುಟ್ಟು ತಿನ್ನಲು ಅರಿತುಕೊಂಡನು.

ಕಬ್ಬಿಣದ ಆಯುಧಗಳನ್ನು ಬೇಟೆಗೆ ಬಳಸಿದ ನಂತರ ಪ್ರಾಣಿಗಳನ್ನು ಮರಸು ಕುಳಿತು ಮರೆಯಲ್ಲಿ ನಿಂತು ಖಡ್ಗದಿಂದ ಕಡಿಯುವುದು, ಈಟಿಯಲ್ಲಿ ಇರಿಯುವುದು, ದೂರದಲ್ಲಿದ್ದರೆ ಬಾಣ ಗುರಿ ನೋಡಿ ಮರ್ಮ ಸ್ಥಾನಕ್ಕೆ ಹೊಡೆದು ಬೇಟೆಯನ್ನು ಉರುಳಿಸುವುದು. ಇದರಿಂದ ಹೆದರಿದ ಪ್ರಾಣಿಗಳು ಮನುಷ್ಯನ ವಾಸಸ್ಥಾನದಿಂದ ದೂರವಾಗಿ ಕಾಡು ಪ್ರದೇಶಗಳಿಗೆ ಓಡಿ ಹೋಗುತ್ತಿದ್ದುದರಿಂದ ಬೇಟೆ ಮೊದಲಿಗಿಂತ ಕಷ್ಟವಾಗಿ ಆಹಾರದ ಉತ್ಪಾದನೆಯು ಕಡಿಮೆಯಾಯಿತು. ಆಗೊಮ್ಮೆ ಈಗೊಮ್ಮೆ ದೊರೆತ ಬೆಟೆಯ ಮಾಂಸದ ಜೊತೆಗೆ ತಿನ್ನಲು ಗೆಡ್ಡೆ - ಗೆಣಸುಗಳನ್ನು ಉಪ ಆಹಾರವನ್ನಾಗಿ ಉಪಯೋಗಿಸಲು ತೊಡಗಿದನು. ಬೇಟೆಯ ಉತ್ಪಾದನೆಯನ್ನು ಹೆಚ್ಚಿಸಲು ಚಿಂತಿಸಿದ. ಅದಕ್ಕೆ ಪ್ರಕೃತಿಯೇ ಮಾರ್ಗವನ್ನು ತೋರಿಸಿತು. ಮೊದಮೊದಲು ಎಲ್ಲಾ ಪ್ರಾಣಿಗಳನ್ನು ತಿನ್ನುತ್ತಿದ್ದ. ನಂತರ ಆತ ಕೆಲವನ್ನು ಮಾತ್ರ ತಿನ್ನತೊಡಗಿದ. ಅದರಲ್ಲೂ ವ್ಯಕ್ತಿಗತ ಅಭಿಪ್ರಾಯಗಳು ಮುಖ್ಯವಾದವು. ಸ್ಥಳೀಯ ಹಾಗೂ ಸಾಂದರ್ಭಿಕ ಕಾರಣಗಳಿಂದ ಕೆಲವು ಪ್ರಾಣಿಗಳ ಮಾಂಸ ನಿಷಿದ್ಧವಾಗಿ ಅದು, ಕ್ರಮೇಣ ಸಾಂಪ್ರದಾಯಿಕವಾಗಿ ಬೆಳೆಯಲು ಕಾರಣವಾಯಿತು. ಇದೇ ಕಾರಣಕ್ಕಾಗಿಯೇ ಪ್ರಾಣಿಗಳನ್ನು ಬೇಟೆಯಾಡುವ ಪದ್ಧತಿ ಮುಂದುವರೆಯುತ್ತಾ ಹೋಯಿತು.

ಬೇಟೆಯ ವಿವಿಧ ತಂತ್ರೋಪಾಯಗಳನ್ನು ಮೃಗ ಪಕ್ಷಿ ಕೀಟಾದಿಗಳಿಂದಲೇ ಮನುಷ್ಯ ಕಲಿತಿರುವುದು ಈ ಬಗೆಗೆ ಯಾವ ವಿವಾದವಿಲ್ಲ. ಜೇಡದಿಂದ ಬಲೆ ಒಡ್ಡುವುದನ್ನು ಕಲಿತರೆ, ಚಿರತೆ, ಹುಲಿಗಳಿಂದ ಮರಸು ಬೇಟೆ ವಿಧಾನವನ್ನು ಅರಿತು ಸೀಳು ನಾಯಿಗಳಿಂದ ಸಮೂಹ ಬೇಟೆಯನ್ನು, ಮುಳ್ಳು ಹಂದಿಗಳಿಂದ ಬಾಣ ಬಿಡುವಿಕೆಯನ್ನು ಕರಗತ ಮಾಡಿಕೊಂಡನು. ಈ ಬೇಟೆಯ ಸುಧಾರಿತ ತಂತ್ರಗಳಿಂದ ಮತ್ತೆ ಗಣನೀಯ ಪ್ರಮಾಣದಲ್ಲಿ ಆಹಾರೋತ್ಪಾದನೆ ಹೆಚ್ಚಿತು. ಇದುವರೆಗೂ ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆ ನಿಂತನು. “ತನ್ನ ಜೀವನ ನಿರ್ವಹಣೆಗೆ ಕೃಷಿ ಕಾರ್ಯಕ್ಕೆ ಕೈ ಹಾಕಿದನು. ತನ್ನ ಕೃಷಿಗೆ ವಾಸಯುಕ್ತವಾದ ಕಾಡುಕುದುರೆ, ದನ, ಕೋಣ, ಕುರಿ, ಮೇಕೆಗಳನ್ನು ಪಳಗಿಸಿ ಸಾಕಲು ತೊಡಗಿದನು” (ಜತ್ತಪ್ಪ ರೈ ೧೯೮೨-೧೨). ಬೇಟೆಯನ್ನು ಕೇವಲ ಆಹಾರ, ಚರ್ಮ, ಕೊಂಬು, ಎಲುಬು ಮುಂತಾದ

ಹಲವು ಉಪಯೋಗಕ್ಕಾಗಿ ಅವಲಂಬಿಸುವುದರ ಜೊತೆಗೆ ತಮ್ಮ ಪೈರನ್ನು, ಸಾಕುವ ದನಕರುಗಳನ್ನು ರಕ್ಷಿಸಿಕೊಳ್ಳಲು ಬೇಟೆಯ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿಕೊಂಡನು.

ಬೇಟೆ ಮುಂದುವರಿದು ಬದುಕಿನ ಅಂಗವಾಗಿ, ಅವನಿಗೆ ಗೌರವ ತರುವ ಮಾರ್ಗವು ಆಯಿತು. ಪ್ರಾಣಿಗಳನ್ನು ಸಾಕುವ ಮತ್ತು ಕೊಲ್ಲುವ ಪ್ರಕ್ರಿಯೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಂದು ಅದರಲ್ಲಿ ಹಿಂಸೆ ಮತ್ತು ಅಹಿಂಸೆಯ ಕಲ್ಪನೆ ಇದ್ದಂತೆ ಕಾಣುವುದಿಲ್ಲ. ಕೆಲವು ಪ್ರಾಣಿಗಳನ್ನು ಸಾಕುವ ಕೆಲವನ್ನು ಕೊಲ್ಲುವ ಕ್ರಿಯೆಯೇ ವೈರುಧ್ಯವಾಗಿ ಕಾಣುತ್ತದೆ. ಕೊಲ್ಲುವ ಕ್ರಿಯೆಯನ್ನು ಒಂದು ಅನಿವಾರ್ಯ ಆಹಾರೋತ್ಪಾದನಾ ವಿಧಾನ ಎಂದು ಭಾವಿಸಿದ್ದರಿಂದ ಅಮ್ದು ಹಿಂಸೆಯ ಕಲ್ಪನೆ ಇರಲು ಸಾಧ್ಯವಿಲ್ಲ. ಊರುಗಳು ಹುಟ್ಟಿ ಬೆಳೆಯುತ್ತಾ ಬಂದಂತೆ ಅಹಿಂಸೆಯ ಕಲ್ಪನೆಗಳು ಬಲಿಯುತ್ತಾ ಬಂದಿವೆ ಎಂದು ಬರಗೂರು ರಾಮಚಂದ್ರಪ್ಪನವರು ಉಪಸಂಸ್ಕೃತಿ ಮಾಲೆ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಕಾಲ ಜಾರಿದಂತೆ ಜನಸಂಖ್ಯೆ ಹೆಚ್ಚಿತು. ಕಾಡು ಕ್ರಮೇಣ ಕಡಿಮೆಯಾಗುತ್ತಾ ಊರುಗಳು ಬೆಳೆದು ಬಂದವು. ಇಂದಿನ ಸ್ಥಿತ್ಯಂತರ ಬದುಕಿನಲ್ಲಿ ಬೇಟೆ ಸಂಸ್ಕೃತಿ ತನ ಸ್ವರೂಪವನ್ನು ಬದಲಿಸಿಕೊಂಡಿದೆ. ಕಾರಣ ಅಂದಿನ ಕಾಡು ಇಂದು ಇಲ್ಲ. ಹುಲಿ ಚಿರತೆಯಂತಹ ಪ್ರಾಣಿಗಳ ತಲೆ ಎಣಿಸುವಷ್ಟು ಅವು ವಿರಾವಾಗಿವೆ. "ಅವುಗಳ ರಕ್ಷಣೆಯ ಜವಾಬ್ದಾರಿಗೆ ಸರಕಾರ ಟೊಂಕಕಟ್ಟಿ ನಿಂತು ಅದಕ್ಕಾಗಿಯೇ ಹಲವು ನಿಯಮ ಕಾನೂನು ಕಟ್ಟಲೆಗಳನ್ನು ಮಾಡಿದೆ. ಇದರಿಂದ ಆದಿಮ ಬದುಕಿನಲ್ಲಿ ಅನಿವಾರ್ಯವಾಗಿದ್ದ ಬೇಟೆ ಇಂದಿನ ಪ್ರತಿಕೂಲ ಪರಿಸ್ಥಿತಿಯಲ್ಲಿ ಕಾಣದಷ್ಟು ಕಣ್ಮರೆಯಾಗುತ್ತಾ ಬಂದಿದೆ. ಕೆಲವು ಕಾಡುಗಳ್ಳರನ್ನು ಬಿಟ್ಟರೆ ಬೇಟೆಯೇ ಪೂರ್ಣ ಜೀವನಾಧಾರ ಮಾಡಿ ಬದುಕುತ್ತಿದ್ದ ಆದಿಮ ಜನವರ್ಗ ಇಂದು ಕಡಿಮೆಯಾಗಿದೆ. ಅವರು ತಮ್ಮ ಬದುಕಿಗಾಗಿ ಬೇರೊಂದು ವೃತ್ತಿಯನ್ನು ಅವಲಂಬಿಸಿದ್ದಾರೆ" (ಸ.ಚಿ. ರಮೇಶ, ೨೦೦೧ - ೧೦).

ದೈಹಿಕ ಹಾಗೂ ಬೌದ್ಧಿಕ ವಿಕಾಸದಲ್ಲಿ ಅನಿವಾರ್ಯವಾಗಿದ್ದ ಬೇಟೆ, ಮಾನವನ ಸಾಂಸ್ಕೃತಿಕ ಇತಿಹಾಸದ ಬೆಳವಣಿಗೆಯ ಮುಂದಿನ ಹಂತಗಳಲ್ಲಿ ಸಾರ್ವತ್ರಿಕವಾಗಿ ಅನಿವಾರ್ಯವಾಗಲಿಲ್ಲ. ಪ್ರಾದೇಶಿಕ ಪರಿಸರದಿಂದಾಗಿಯೂ ಬೇಟೆ ವ್ಯತ್ಯಾಸವಾಗುತ್ತದೆ. ಕಾಡಿನ ಪ್ರದೇಶಗಳಲ್ಲಿ ಬದುಕುವ ಜನವರ್ಗಕ್ಕೆ ಬೇಟೆ ಅನಿವಾರ್ಯವಾದರೆ, ಬಯಲು ಪ್ರದೇಶದಲ್ಲಿ ಬದುಕುವ ಜನವರ್ಗಕ್ಕೆ ಅದು ಅನಿವಾರ್ಯವಾಗುವುದಿಲ್ಲ. ಅದರ ಬದಲಾಗಿ ಬಯಲು ಪ್ರದೇಶದ ಜನವರ್ಗ ಪ್ರಾಣಿಗಳನ್ನು ಸಾಕುವ ಕೆಲಸ ಕಾರ್ಯದಲ್ಲಿ ತೊಡಗಿ ಅದರಿಂದ ತಮಗೆ ಬೇಕಾದ ಮಾಂಸವನ್ನು ಪಡೆದರು. ಮಲೆನಾಡಿನ ಕೃಷಿಕರು ಬೇಟೆಯನ್ನು ಉಳಿಸಿಕೊಂಡ ರೀತಿಯೇ ಬೆರೆಯಾಗಿದೆ. "ವ್ಯವಸಾಯವನ್ನೇ ಪ್ರಮುಖ ಕಸುಬಾಇ ಮಾಡಿಕೊಂಡಿರುವ ಇವರು ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಇವರಿಗೆ ಬೇಟೆ ಬೇಸರ ನೀಗುವ, ಸಾಹಸ ಮರೆವ ಸಾಧನವೂ ಹೌದು" (ಹಿರಿಯಣ್ಣ : ೧೯೯೯ - ೧೨೯).

ಪ್ರಾಣಿಗಳನ್ನು ಸಾಕುವ ಪ್ರವೃತ್ತಿಯೇ ಬೇಟೆಯು ಬಯಲು ನಾಡಿನವರಲ್ಲಿ ಕಡಿಮೆಯಾಗಲು ಕಾರಣವಾಯಿತು. "ಆದರೆ ಇಂತಹ ಎಲ್ಲಾ ಸಂದರ್ಭಗಳಲ್ಲೂ ಪ್ರಾಣಿ ಸಿಗುವ ಸಂಭವ ಇಲ್ಲವಾದ್ದರಿಂದ, ಇಂತಹ ಪ್ರದೇಶಗಳಲ್ಲಿ ಪ್ರಾಣಿಗಳನ್ನು ಮನೆಯಲ್ಲಿ ಸಾಕುವ ಹಾಗೂ ಇಂತಹ ಸಾಕು ಪ್ರಾಣಿಗಳ ಸಂತತಿಯನ್ನು ಬೆಳೆಸುವ ಪ್ರವೃತ್ತಿಯೇ ಬೇಟೆಯ ಸಂಸ್ಕೃತಿಯನ್ನು ಕಡಿಮೆ ಮಾಡಿದಂತೆ ಕಾಣಿಸುತ್ತದೆ" (ವಿವೇಕ ರೈ. ಬಿ.ಎ. ೧೯೪೮-೨೪೨). ಪರಿಮಿತ ಭೌಗೋಳಿಕ ಪ್ರದೇಶದಲ್ಲಿ ಬದುಕುತ್ತಿದ್ದ ಜನವರ್ಗಗಳು ಬೇಟೆಯನ್ನು ತಮ್ಮ ಆಹಾರೋತ್ಪಾದನ ಮಾರ್ಗಗಳಲ್ಲೊಂದಾಗಿ ಮಾಡಿಕೊಂಡು ಮುಂದುವರಿದರು. ಈ ಜನವರ್ಗವು ಸಾಂಸ್ಕೃತಿಕ ವಿಕಾಸದ ಆರಂಭದ ಹಂತಗಳನ್ನು ದಾಟಿಲ್ಲ. ಇವರಲ್ಲಿ ಪ್ರಾಚೀನ ಸಂಸ್ಕೃತಿಯ ಅನೇಕ ಪಳೆಯುಳಿಕೆಗಳು ಕಂಡುಬರುತ್ತವೆ. ಹೀಗೆ ಬಾಹ್ಯ ಸಂಪರ್ಕಕ್ಕೆ ಒಳಗಾಗದ ಜನವರ್ಗಗಳು ಗುಡ್ಡಗಾಡು ಜನಾಂಗಗಳಾಗಿ ಬೆಳೆದು ಬಂದಿವೆ.

ಮಲೆನಾಡಿನ ಕೃಷಿಕರಲ್ಲಿ ಆದಿವಾಸಿ ಬೇಟೆ ವಿಧಾನದ ಅಂಶಗಳಿವೆ. "ಇವರು ಹೆಚ್ಚಾಗಿ ಸಾಂಪ್ರದಾಯಿಕ ಬೇಟೆ ವಿಧಾನಗಳನ್ನೇ ಅನುಸರಿಸುತ್ತಾರೆ. ಈ ಬೇಟೆ ತಂತ್ರಗಳು ಆದಿವಾಸಿ ಬೇಟೆ ವಿಧಾನ ತಂತ್ರಗಳನ್ನು ನೆನಪಿಗೆ ತರುತ್ತವೆ. ಪ್ರತಿಯೊಂದು ಪ್ರಾಣಿಯನ್ನು ಕೊಲ್ಲಲು ಬೇರೆ ಬೇರೆ ತಂತ್ರಗಳನ್ನು ಕಂಡುಕೊಳ್ಳುವುದರ ಜೊತೆಯಲ್ಲೇ ಅದಕ್ಕೆ ಬೇಕಾದ ಸಾಧನ ಸಲಕರಣೆಗಳ ಕುಮ್ಮಕ್ಕನ್ನು ಬಳಸಿಕೊಳ್ಳುತ್ತಾರೆ. ಬೇಟೆಯಲ್ಲಿ ನಾಯಿಗಳ ನೆರವನ್ನು ಇವರು ಹೆಚ್ಚಾಗಿ ಪಡೆದುಕೊಳ್ಳುವುದು ಕಂಡುಬರುತ್ತದೆ (ಹಿರಿಯಣ್ಣ ೧೯೯೯ - ೧೨೯).

ಈಗಲೂ ಪ್ರತ್ಯೇಕವಾಗಿ ಬದುಕು ಸಾಗಿಸುತ್ತಿದ್ದ ಗುಡ್ಡಗಾಡು ಜನವರ್ಗಗಳು ಕಾಣಸಿಗುತ್ತವೆ. ಬಯಲು ಪ್ರದೇಶದಲ್ಲಿ ನೆಲೆನಿಂತ ಜನವರ್ಗಗಳು ಸಂಸ್ಕೃತಿಯ ವಿಕಾಸದಲ್ಲಿ ನಾಗರಿಕತೆಯನ್ನು ಬಹುಬೇಗನೆ ಸಾಧಿಸಿಕೊಂಡವು. ಈ ಜನವರ್ಗಗಳು, ಬೇಟೆಯ ಜೊತೆ ಜೊತೆಗೆ ತಾವು ತಲೆತಲಾಂತರದಿಂದ ಕಂಡುಕೊಂಡ ಅನೇಕ ತಂತ್ರಜ್ಞಾನಗಳ ಬಲದಿಂದ ಕೃಷಿಯನ್ನು ತಮ್ಮ ಮುಖ್ಯ ಕಸುಬನ್ನಾಗಿಸಿಕೊಂಡವು. ತಾವು ಬೆಳೆದ ಬೆಳೆಯನ್ನು, ಸಾಕು ಪ್ರಾಣಿಗಳನ್ನು ರಕ್ಷಿಸಿಕೊಳ್ಳಲು ಬೇಟೆಯನ್ನು ಬಳಸಿಕೊಳ್ಳಲಾಯಿತು. “The development of agriculture made hunting less man’s sole life support, but he still pursued it to protect crops. Flocks, or herds as well as for food. The hunter’s Continual training with his impliments and in tracking and stalking had a social value in maintaining group activity, earning prestige, and preserving tradition” (Encyclopaedia Britanica, Vol.6.199 – 159). ಕೃಷಿಯಿಂದಾಗಿ ಭೂ ಒಡೆತನದ ಕಲ್ಪನೆಗಳು ಕಾಣಿಸಿಕೊಂಡವು. ಸಹಜವಾಗಿ ಯಜಮಾನ ಸಂಸ್ಕೃತಿ ಬೆಳೆಯಿತು. ಆರ್ಥಿಕ ಸ್ಥಿತಿ ಮಾನವನ ಅಂತಸ್ತನ್ನು ನಿರ್ಣಯಿಸುವ ಮಾನದಂಡವಾಯಿತು. ಭೂ ಒಡೆಯನೋ, ರಾಜನೋ, ಬಲ್ಲಾಳನೋ - ಯಾರೇ ಆಗಲಿ ಆತ ಬೇಟೆಗಾರ ಸಂಸ್ಕೃತಿಗಿಂತ ಭಿನ್ನವಾದ ಹಾಗೂ ಸಾಪೇಕ್ಷವಾಗಿ ಶಿಷ್ಟಸಂಸ್ಕೃತಿಯ ಬೆಳವಣಿಗೆಗೆ ಕಾರಣನಾದ. ಕೃಷಿಯಿಂದ ಆರ್ಥಿಕ ಅಂತಸ್ತನ್ನು ಹೆಚ್ಚಿಸಿಕೊಂಡ ಯಜಮಾನ ಸಂಸ್ಕೃತಿಯ ಮುಖಂಡರುಗಳಿಗೆ ಬೇಟೆಯ ಮನರಂಜನೆಯ ಒಂದು ಸಾಧನವಾಯಿತು.

ಚರಿತ್ರೆ ಕೂಡ ತನ್ನ ಒಡಳೊಳಗೆ ಅನೇಕ ಬಗೆಯ ಬೇಟೆಯ ಮಾಹಿತಿಗಳನ್ನು ಅಡಗಿಸಿಕೊಂಡಿದೆ. ಬೇಟೆಯು ಮಾನವನಿಗೆ ಅನಿವಾರ್ಯವಾಗಿತ್ತೆನ್ನುವುದರ ಮೇಲೆ ಇದು ಬೆಳಕು ಚೆಲ್ಲುತ್ತದೆ. ಶಾಸನ, ಗ್ರಂಥ ಉಬ್ಬುಶಿಲ್ಪಗಳು, ಕೋಟೆಯ ಹೆಬ್ಬಾಗಿಲುಗಳು, ದೇವಾಲಯಗಳ ಶಿಲ್ಪಗಳು ಹೆಸರುಗಳು ಉದಾಹರಣೆಗೆ ಬೇಟೆರಂಗ, ಬೇಟೆಬಾಗಿಲು ಇತ್ಯಾದಿ. ಜನಪದ ಮೌಖಿಕ ಇತಿಹಾಸಗಳಾದ ಕತೆ, ಹಾಡು, ಪುರಾಣ, ಐತಿಹ್ಯ ಮುಂತಾದವುಗಳನ್ನು ಉದಾಹರಿಸಿಬಹುದು. ಅನೇಕ ಸಾಮ್ರಾಜ್ಯಗಳ ಹುಟ್ಟಿಗೆ ಬೇಟೆ ಕಾರಣವಾಯಿತು ಎನ್ನುವುದು ಜನಪದ ಕತೆಗಳಿಂದ ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಹುಟ್ಟಿನ ಬಗೆಗೆ ಬೇಟೆಯಾಡುತ್ತಾ ಬಂದಾಗ ಅಲ್ಲಿ ವಾಸವಾಗಿದ್ದ ಮೊಲಗಳು ಅವರ ಬೇಟೆ ನಾಯಿಗಳನ್ನು ಬೆನ್ನಟ್ಟಿ ಹೋದವು. ಇಷ್ಟೇ ಅಲ್ಲ. ಅವರು ಏರಿದ ಕುದುರೆಗಳ ಕಾಲುಗಳನ್ನು ಕಚ್ಚಿದವಂತೆ. ಅಲ್ಲಿ ನಡೆದ ವಿಚಿತ್ರವೂ, ಆಶ್ಚರ್ಯವೂ ಅದ ಘಟನೆಯನ್ನು ಆ ಪ್ರದೇಶದ ಋಷಿಮಾನ್ಯರಾದ ವಿದ್ಯಾರಣ್ಯರಿಗೆ ತಿಳಿಸಿದರು. ಬಹುಕಾಲದಿಂದಲೂ ಆ ತಪೋಭೂಮಿಯಲ್ಲಿ ನೆಲೆಯಾಗಿದ್ದ ವಿದ್ಯಾರಣ್ಯರು ಚಿಂತಿಸಿ ನಂತರ ಹೀಗೆ ಹೇಳಿದರು. ಇದು ಗಂಡುಮೆಟ್ಟಿನ ನೆಲ ಎಲ್ಲ ಪ್ರದೇಶಗಳಲ್ಲೂ ಹೀಗೆ ಘಟಿಸಲು ಸಾಧ್ಯವಿಲ್ಲ. ಎಲ್ಲಿ ದುರ್ಬಲವೂ, ಸಾಮಾನ್ಯವೂ ಆದ ಪ್ರಾಣಿ ಬಲಿಷ್ಟವೂ, ದರ್ಪವೂ ಆಗಿ ವರ್ತಿಸುತ್ತದೆಯೋ ಅಲ್ಲಿ ಭೂಮಿಯು ದೈವಿಕ ಮಹತ್ವವನ್ನು ಹೊಂದಿರುತ್ತದೆ. ನೀವು ಸಾಮ್ರಾಜ್ಯ ಸ್ಥಾಪಿಸಲು ಇದು ಒಳ್ಳೆಯ ಗಂಡು ಭೂಮಿ. ಈ ಸಲುವಾಗಿ ನಾನು ತಾಯಿ ಭುವನೇಶ್ವರಿಯನ್ನು ಕುರಿತು ತಪಸ್ಸು ಮಾಡಿ ವರ ಪಡೆಯುತ್ತೇನೆ. ತಪಸ್ಸಿನಿಂದ ಫಲ ಲಭಿಸಿದ ನಂತರ ಶಂಖ ಊದುತ್ತೇನೆ. ಶಂಖನಾದ ಕೇಳಿದ ಮರುಗಳಿಗೆಯಲ್ಲಿಯೇ ನೀವು ಸಾಮ್ರಾಜ್ಯ ಸ್ಥಾಪಿಸಿ ಎಂದು ಹೇಳಿದರು. ಅದರಂತೆ ಸಾಮ್ರಾಜ್ಯ ಸ್ಥಾಪನೆಗೆ ಎಲ್ಲ ಸಿದ್ಧತೆಯನ್ನು ಮಾಡಿಕೊಂಡು ಹಕ್ಕ-ಬುಕ್ಕರು ಎದುರು ನೋಡುತ್ತಿರುತ್ತಾರೆ. ಇತ್ತ ವಿದ್ಯಾರಣ್ಯರು ದೇವಿಯಿಂದ ಎಂದೂ ಅಳಿಯದ ಸಾಮ್ರಾಜ್ಯ ಸ್ಥಾಪಿಸಲು ವರ ಪಡೆಯಲು ತಪಸ್ಸು ಮಾಡುತ್ತಾರೆ. ದೇವಿ ಪ್ರತ್ಯಕ್ಷಳಾಗಿ ಏನು ವರಬೇಕು ಎಂದು ಕೇಳುವ ವೇಳೆಗೆ ಮಾಯಾವಿ ಭಿಕ್ಷುಕನೊಬ್ಬ ಶಂಖವನ್ನು ಬಿಡದೆ ಊದುತ್ತಾನೆ. ಶಂಖನಾದವನ್ನು ಕೇಳಿದ ಹಕ್ಕ-ಬುಕ್ಕರು ವಿದ್ಯಾರಣ್ಯರು ಊದಿದ ಶಂಖನಾದವೆಂದೇ ತಿಳಿದು ಸಾಮ್ರಾಜ್ಯ ಸ್ಥಾಪನೆ ಮಾಡಿಬಿಟ್ಟರು. ಇದರಿಂದ ನೊಂದ ವಿದ್ಯಾರಣ್ಯರು ದೇವಿಯನ್ನು ಕೇಳಲಾಗಿ ಪ್ರಕೃತಿ ನಿಯಮದಂತೆ ಹುಟ್ಟಿದುದು ಅಳಿಯಲೇ ಬೇಕು. ಚಿರಕಾಲ ಉಳಿಯುವ ಸಾಮ್ರಾಜ್ಯ ಸ್ಥಾಪಿಸಲು ಸಾಧ್ಯವಿಲ್ಲ ಎಂದು ತಾಯಿ ಭುವನೇಶ್ವರಿ ಹೇಳಿದಳಂತೆ. ಮುಂದೆ ಸಾಮ್ರಾಜ್ಯ ಸ್ಥಾಪಿಸಲು ಆ ಭಾಗಕ್ಕೆ ಬಂಗಾರದ ಮಳೆ ಸುರಿಸಿದಳಂತೆ. ದೇವಿ ಸುರಿಸಿದ ಬಂಗಾರದ ಮಳೆಯಿಂದ ವಿದ್ಯಾರಣ್ಯರು ಹಕ್ಕ-ಬುಕ್ಕರಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿಸಿದರಂತೆ. ಹೀಗೆ ಹಲವಾರು ಸಾಮ್ರಾಜ್ಯಗಳ ಹಿಂದೆ ಬೇಟೆ ಸಂಸ್ಕೃತಿಯ ಐತಿಹ್ಯಗಳು ಹೇರಳವಾಗಿ ಸಿಗುತ್ತವೆ. ಈ ಹೇಳಿಕೆಗಳು ಪೂರ್ಣ ಸತ್ಯಕ್ಕೆ ಹತ್ತಿರವಾಗಿಲ್ಲದಿದ್ದರೂ, ಬೇಟೆ ಒಂದು ಸಾಮ್ರಾಜ್ಯದ ಸ್ಥಳದ ಆಯ್ಕೆಯಲ್ಲಿ ಬಹು ಮಹತ್ವದ ಸ್ಥಾನ ಪಡೆದಿರಬಹುದು ಎನ್ನುವುದರ ಮೇಲೆ ಬೆಳಕು ಚೆಲ್ಲುತ್ತದೆ.

ಅಂದಿನ ಕಾಲದ ರಾಜರು ಕಟ್ಟಿಸಿದ ಕೋಟೆಯ ಹೆಬ್ಬಾಗಿಲುಗಳಲ್ಲಿ ಬೇಟೆಗಾರರ ಹೆಬ್ಬಾಗಿಲು ಒಂದು. ಹೀಗೆ ಹೆಸರಿಟ್ಟಿದ್ದ ಹಿಂದೆ ವಿಜಯನಗರ ಅರಸರು ಹಾಗೂ ಅಲ್ಲಿನ ಜನರಿಗೆ ಬೇಟೆಯ ಬಗೆಗಿರುವ ಉತ್ಸಾಹ ಹಾಗೂ ಮಹತ್ವ ಅಡಗಿರುವುದು ತಿಳಿದು ಬರುತ್ತದೆ. ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಪ್ರಚಲಿತವಿದ್ದ ಹಲವಾರು ಬೇಟೆ ಸಂಪ್ರದಾಯದ ಉಲ್ಲೇಖಗಳು ಆ ಕಾಲದಲ್ಲಿ ರಚನೆಯಾದ ಶಾಸನ, ಗ್ರಂಥ ಹಾಗೂ ಉಬ್ಬುಶಿಲ್ಪಗಳಲ್ಲಿ ಕಂಡುಬರುತ್ತವೆ. ಅಂದಿನ ಅರಸರು ಆಚರಿಸುತ್ತಿದ್ದ ದಸರಾ ಹಬ್ಬದಲ್ಲಿ, ನಗರದಲ್ಲಿ ಏರ್ಪಡಿಸುತ್ತಿದ್ದ ಇತರೆ ಹಬ್ಬ ಹಾಗೂ ಆಚರಣೆಗಳಲ್ಲಿ ರಾಜರೊಡನೆ ಬೇಟೆಗೆ ಹೋದ ಬೇಟೆಗಾರರು, ಬೇಟೆಯಾಡಿ ಸಂಪಾದಿಸಿದ ಬೇಟೆಯ ಪ್ರಾಣಿಯನ್ನು ಹೊತ್ತು ನಗರವನ್ನು ಬೇಟೆ ಹೆಬ್ಬಾಗಿಲಿನಿಂದ ಪ್ರವೇಶ ಮಾಡುತ್ತಿದ್ದರೆಂದು ಗ್ರಂಥಗಳಿಂದ ತಿಳಿದುಬರುತ್ತದೆ. ರಾಜನಿಂದ ಸಾಮಾನ್ಯನವರೆಗೆ ಬೇಟೆ ಪ್ರಚಲಿತವಿತ್ತು. ವಿಜಯನಗರವನ್ನು ಆಳಿದ ಮೊದಲ ರಾಜವಂಶದ ಸಂಗಮರ ಇಮ್ಮಡಿ ದೇವರಾಯನಿಗೆ ಹಲವಾರು ಬಿರುದುಗಳಿದ್ದವು. ಅವುಗಳಲ್ಲಿ 'ಗಜಬೇಂಟೆಕಾರ' ಎನ್ನುವುದು ಒಂದು. ಈ ಬಿರುದಾವಳಿಯ ಹಿಂದೆ ಆತನಿಗಿರುವ ಬೇಟೆಯ ಬಗೆಗಿನ ಆಸಕ್ತಿ ಶೂರತ್ವ ಹಾಗೂ ಆನೆಯ ಬೇಟೆಯ ಬಗೆಗಿನ ಚಾಣಾಕ್ಷತನ ಅಡಗಿರುವುದು ತಿಳಿದುಬರುತ್ತದೆ. ಆನೆಯ ಬೇಟೆಯ ಬಗೆಗಿನ ಉಬ್ಬುಶಿಲ್ಪಗಳನ್ನು ಮಹಾನವಮಿ ದಿಬ್ಬ, ವಿಠಲದೇವಸ್ಥಾನ, ಹಜಾರಾಮದೇವಸ್ಥಾನದ ಕಂಬಗಳು ಹಾಗೂ ಗೋಡೆಯ ಮೇಲೆ ಕಾಣಬಹುದು.

ವಿದೇಶಿ ಪ್ರವಾಸಿ ಅಬ್ದುಲ್‌ರಜಾಕನು ವಿಜಯನಗರಕ್ಕೆ ಭೇಟಿ ನೀಡಿದಾಗ ಆ ಕಾಲದ ವರಹಗಳ ಬಗೆಗೆ ಉಲ್ಲೇಖಿಸುತ್ತಾನೆ. ಆತನು ಎರಡನೆಯ ದೇವರಾಯನ ಕಾಲದಲ್ಲಿ ಭೇಟಿ ನೀಡಿದಾಗ ವರಹಗಳು (ಕರೆನ್ಸಿ) ಅದರಲ್ಲಿ ೧/೪ ವರಹವು ಚಿನ್ನದ್ದಾಗಿದ್ದು ೧೨.೨ ಗ್ರೇನ್ಸ್ ತೂಗುತ್ತಿತ್ತು. ದೇವರಾಯ ಗಜಬೇಟೆಗಾರನಾಗಿದ್ದ ಕಾರಣ ಅವನ ಕಾಲದ ನಾಣ್ಯಗಳ ಮೇಲೆ ಅನೆಯ ಚಿತ್ರಗಳು ಕಂಡುಬರುತ್ತವೆ. 'ತಾರ' ಎಂಬ ಬೆಳ್ಳಿಯ ನಾಣ್ಯದ ಒಂದು ಮುಖದಲ್ಲಿ ಬಳ್ಳಿಯ ಚಿತ್ರವಿದ್ದು ಇನ್ನೊಂದೆಡೆ 'ಶ್ರೀ ದೇವರಾಯ; ಎಂಬ ದೇವನಾಗರಿ ಲಿಪಿ ಇದೆ. ಆ ಕಾಲದ ಅನೇಕ ತಾಮ್ರ ನಾಣ್ಯಗಳ ಮೇಲೆ ಆನೆ ಮತ್ತು ರಾಜನು ಆನೆ ಬೇಟೆ ಮಾಡುವ ಚಿತ್ರಗಳು ಕಂಡು ಬಂದು, ಶ್ರೀ ದೇವರಾಯ, ಗಜಬೇಟೆಗಾರ, ರಾಯರಾಹಗಂಡ, ಭೇರುಂಡ ಎಂಬ ಉಲ್ಲೇಖಗಳು ಕಂಡುಬರುತ್ತವೆ.

ಮಹಾನವಮಿ ದಿಬ್ಬ ಹಾಗೂ ವಿಜಯ ವಿಠಲ ಗುಡಿಯ ಸಭಾಮಂಟಪದ ಹಿಂಭಾಗದಲ್ಲಿ ಹುಲಿಯ ಬೇಟೆಯ ಉಬ್ಬು ಶಿಲ್ಪಗಳಿವೆ. ಇವು ಆ ಕಾಲದ ಹುಲಿಯ ಬೇಟೆಯ ಮೇಲೆ ಬೆಳಕು ಚೆಲ್ಲುತ್ತವೆ. ತುಂಗಭದ್ರೆ ನದಿಯ ವಿಶಾಲ ಬಯಲು ಪ್ರದೇಶದ ಹುಲ್ಲುಗಾವಲು ಪಶುಪಾಲಕರ ತಾಣವಾಗಿತ್ತು. ಅವರ ಸಾಕುಪ್ರಾಣಿಗಳನ್ನು ತಿನ್ನಲು ಹವಣಿಸುತ್ತಿದ್ದ ಹುಲಿ ಚಿರತೆಗಳನ್ನು ನಿಗ್ರಹಿಸಲು ಬೇಟೆಯಾಡುತ್ತಿದ್ದರು. ಈ ಪ್ರದೇಶದಲ್ಲಿ ನೆಲೆನಿಂತ ಕುರುಬರು, ಗೊಲ್ಲರು, ಮ್ಯಾಸಬೇಡರು ಇಂದಿಗೂ ಪಶುಪಾಲಕರಾಗಿರುವುದು ಮೇಲಿನ ಹೇಳಿಕೆಗೆ ಸಾಕ್ಷಿಯಾಗಿದೆ. ಇಷ್ಟೆ ಅಲ್ಲದೆ ಮಹಾನವಮಿ ದಿಬ್ಬದ ಎದುರಿಗೆ ಕಂಡುಬರುವ ಬುನಾದಿಯ ಚೌಕಟ್ಟಿನ ಕಟ್ಟಡ ಒಂದರ ಸುತ್ತ, ವಿಜಯ ವಿಠಲ ದೇವಾಲಯದ ಹೊರಭಾಗದಲ್ಲಿ, ಮಹಾನವಮಿದಿಬ್ಬದ ದಕ್ಷಿಣ ಭಾಗದ ಹೊರಗೋಡೆಯ ಮೇಲಿನ ಉಬ್ಬು ಚಿತ್ರಗಳು, ಬೆಟ್ಟ, ಗುಡ್ಡಗಳಲ್ಲಿರುವ ಗವಿಗಳ ಒಳಗಿನ ವರ್ಣಚಿತ್ರಗಳು ಆಗಿನ ಕಾಲದ ಜಿಂಕೆಯ ಬೇಟೆಯ ಬಗೆಗೆ ಬೆಳಕು ಚೆಲ್ಲುತ್ತವೆ. ವಿಶೇಷವೆಂದರೆ ವಿಜಯನಗರ ಅರಸರ ರಾಜ್ಯ ಲಾಂಛನವಾದ ಹಂದಿ (ವರಹ) ಯ ಬೇಟೆಯ ಬಗೆಗಿನ ಉಬ್ಬು ಶಿಲ್ಪಗಳು ಇಲ್ಲಿನ ಹಲವಾರು ದೇವಾಲಯಗಳಲ್ಲಿ ಕಂಡುಬರುತ್ತವೆ. ಹಂದಿಯನ್ನು ವಿಷ್ಣುವಿನ ಅವತಾರವೆಂದು, ತಮ್ಮ ಧನ (ಕರೆನ್ಸಿ) ಸಂಪತ್ತಿಗೂ 'ವರಹ' ಗಳೆಂದು ಕರೆಯುತ್ತಿದ್ದರು ಹಾಗೂ ಪೂಜಿಸುತ್ತಿದ್ದರು.




ಇಂದಿಗೂ ತುಳುನಾಡಿನಲ್ಲಿ ಹಂದಿ ಪಿಲಿಪಂಜಿ ದೈವವಾಗಿ ಪೂಜೆಗೊಳ್ಳುತ್ತಿದೆ. ಹಾಗೆಯೇ ಈ ಭಾಗವು ಸೇರಿದಂತೆ ಮಲೆನಾಡಿನ ಹಲವು ಭಾಗಗಳಲ್ಲಿ ಹಂದಿಯನ್ನು ಬಲಿಯಾಗಿ ಅರ್ಪಿಸುವ ಪದ್ಧತಿಯು ರೂಢಿಯಲ್ಲಿದೆ. ಬಲಿಯ ಅರ್ಪಣೆಯ ರೀತಿಯು ಅಮಾನವೀಯವೂ, ಹಿಂಸಾತ್ಮಾಕವಾಗಿಯೂ ನಡೆಯುತ್ತದೆ. ಜೀವಂತ ಹಂದಿಯನ್ನು ಕಟ್ಟಿ ಅಂಗಾತ ಮಲಗಿಸಿ ಒನಕೆಯಿಂದ ಬಡಿಬಡಿದು ಬಲಿ ಅರ್ಪಿಸುತ್ತಾರೆ. ಇದೇ ರೀತಿಯ ಹಿಂಸಾತ್ಮಕವೂ ಅಮಾನವೀಯವೂ ಆದ ಪದ್ಧತಿಯೊಂದು ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ

ರೂಢಿಯಲ್ಲಿದೆ. ಇಲ್ಲಿನ ಪದ್ಧತಿ ಎಂದರೆ ಜೀವಂತ ಹಂದಿ ತನಗೆ ತಾನೇ ಜನ ವಾಸಿಸುವ ಮನೆಯ ಒಳಗೆ ಬಂದರೆ ಅದನ್ನು ಮನೆಯ ಒಳಗಡೆ ಕಾಲುಮುರಿದು ಅಲ್ಲಿಯೇ ಕಂದಕ ಕಡಿಸು ಜೀವಂತ ಮಣ್ಣು ಮಾಡಲಾಗುತ್ತದೆ. ಇದು ಅವರ ಪಾಲಿಗೆ ಲಕ್ಷ್ಮಿಯಾಗಿ ಪೂಜೆಗೊಳ್ಳುತ್ತದೆ. ನಾಯಕ ಜನವರ್ಗದಲ್ಲಿ ಹೆಚ್ಚಾಗಿ ಈ ಪದ್ಧತಿ ರೂಢಿಯಲ್ಲಿದೆ. ಈ ಭಾಗದ ನಾಯಕ ಜನವರ್ಗ ಹಂದಿ ಹಾಗೂ ಕೋಳಿಯನ್ನು ತಿನ್ನುವುದಿಲ್ಲ. ಆದರೆ ಅವುಗಳನ್ನು ಬೇಟೆಯಾಡುತ್ತಾರೆ. ಹಿಂದೆ ವಿಜಯನಗರ ಅರಸರ ಕಾಲದಲ್ಲಿ ಸೈನ್ಯದಲ್ಲಿದ್ದರೆನ್ನಲಾದ ಈ ಜನವರ್ಗ ರಾಜರಂತೆ ಹಂದಿಯನ್ನು ಪೂಜಿಸುತ್ತಿದ್ದಿರಬೇಕು. ತಮ್ಮ ಭಾಗದ ದೈವವಾಗಿದ್ದ ವರಹವನ್ನು ಭಕ್ತಿ ಗೌರವಗಳೊಂದಿಗೆ ಇಂದಿಗೂ ಪೂಜಿಸುತ್ತಾರೆ.

ಒಂದು ಸಾಮ್ರಾಜ್ಯದಲ್ಲಿ ಹಲವು ಜನವರ್ಗಗಳು ಇರುವುದು ಸಹಜ. ಹಲವು ಜನವರ್ಗಗಳಿರುವ ಕಡೆ ಹಲವಾರು ಸಂಪ್ರದಾಯ ಆಚರಣೆಗಳಿರುವುದು ಸಾಮಾನ್ಯ. ಹೀಗಾಗಿ ಇಲ್ಲಿಯ ದೇವಾಲಯ ಹಾಗೂ ಗವಿಗಳಲ್ಲಿ ಹಂದಿ ಇತರ ಪ್ರಾಣಿಗಳನ್ನು ಪೂಜಿಸುವ ಹಾಗೂ ಬೇಟೆಯಾಡುವ ಚಿತ್ರಗಳಿವೆ. ಇಲ್ಲಿನ ಚಿತ್ರಗಳಲ್ಲಿ ಬೇಟೆಗೆ ಹೋಗುವ ಬೇಟೆಯಾಡುವ, ಬೇಟೆಯನ್ನು ಹೊತ್ತು ಸಾಗಿಸುವ, ಬೇಟೆಯನ್ನು ಸುಟ್ಟು ತಿನ್ನುವ ಉಬ್ಬು ಚಿತ್ರಗಳನ್ನು ಹೇರಳವಾಗಿ ಕಾಣಬಹುದು. ಬೇಟೆ ಜನಸಾಮಾನ್ಯರಿಗೆ ಆಹಾರೋತ್ಪಾದನೆ ಅಂಗವಾದರೆ, ಉಳ್ಳವರಿಗೆ ಅದು ಮನೋರಂಜನೆಯ ಸಾಧನವಾಗಿತ್ತು.

ಬೇಟೆಯಲ್ಲಿ ಜನ ಪಾಲ್ಗೊಳ್ಳುವಿಕೆಯನ್ನು ಗಮನಿಸಿದರೆ ಕೆಲವು ಸಮುದಾಯಕ್ಕೆ ಬೇಟೆ ಕೇವಲ ಆಚರಣೆಯಾಗಿರುವುದು ಕಂಡುಬರುತ್ತದೆ. ಬೇಟೆಯಲ್ಲಿ ದೊರೆತ ಪ್ರಾಣಿಗಳನ್ನು ಅವರು ಆಹಾರವಾಗಿ ಉಪಯೋಗಿಸುವುದಿಲ್ಲ. ಉತ್ತರ ಕರ್ನಾಟಕದ ಭಾಗದಲ್ಲಿ ಕಂಡುಬರುವ ನಾಯಕ ಜನವರ್ಗದವರ ಆಚರಣೆಗಳನ್ನು ಉದಾಹರಿಸಬಹುದು. ದಕ್ಷಿಣ ಕರ್ನಾಟಕದ ಕೆಲವು ಭಾಗಗಳ ಜನ ವರ್ಗಗಳು ಧನುರ್ಮಾಸದಲ್ಲಿ ಮಾಡುವ ಬೇಟೆಯನ್ನು ಉದಾಹರಿಸಬಹುದು. ಇನ್ನು ಬೇಟೆಯನ್ನು ಕೇವಲ ಆಚರಣೆಗಾಗಿಯೇ ಪ್ರಾಣಿಗಳ ಬೊಂಬೆ ಮಾಡಿ ಬೇಟೆಯ ಅಣಕವನ್ನು ಮಾಡುವ ಜನವರ್ಗಗಳು ಇವೆ. ಹಾಗೆಯೇ ಆಹಾರ ಮತ್ತು ಆರಾಧನೆಗಾಗಿಯೇ ಬೇಟೆಯಾಡುವ ಜನವರ್ಗಗಳು ಇವೆ. ಈ ಎಲ್ಲಾ ಬೇಟೆಯ ಆಚರಣೆಗಳು ಮಾನವ ಹಾಗೂ ಬೇಟೆಯ ಬಗೆಗಿನ ಬಹು ಸೂಕ್ಷ್ಮ ಸಂಬಂಧದ ಬಗೆಗೆ ಬೆಳಕು ಚೆಲ್ಲುತ್ತವೆ. ಮಾನವನು ಬೌದ್ಧಿಕ ಹಾಗೂ ದೈಹಿಕ ಬೆಳವಣಿಯಿಂದಾಗಿ ಪ್ರಾಣಿಯಿಂದ ಮಾನವ ಭಿನ್ನವಾದ. ಅಂದಿನಿಂದ ಬೇಟೆಯ ವಿವಿಧ ಮಗ್ಗಲುಗಳು, ತಂತ್ರೋಪಾಯಗಳು ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದವು. ಅವು ಆಚರಣೆಯಲ್ಲಿ ಉಳಿದು ಬಿಟ್ಟವು.

ಬೇಟೆಯಲ್ಲಿ ಹಲವು ಬಗೆಯ ವಿಧಾನಗಳಿವೆ. ಹಾಗೆಯೇ ಹಲವಾರು ಜನ, ಪ್ರಾಣಿ, ಪರಿಕರಗಳನ್ನು ಉಪಯೋಗಿಸಿ ಮಾಡುವ ದೊಡ್ಡ ತಂಡಗಳಿಂದ ಹಿಡಿದು ಒಬ್ಬರೇ ಬೇಟೆಯಾಡುವ ವಿಧಾನಗಳು ಚಾಲಿಗೆ ಬಂದವು. ಬೇಟೆಯನ್ನು ಅಧ್ಯಯನ ದೃಷ್ಟಿಯಿಂದ ಅದು ಒಳಗೊಳ್ಳುವ ವಿವರವನ್ನು ಕೆಳಗಿನ ವಿಭಾಗ ಕ್ರಮದಲ್ಲಿ ವಿಭಾಗಿಸಿ ಅರ್ಥೈಸಿಕೊಳ್ಳಬಹುದು.



ಒಂದು ದೊಡ್ಡ ಬೇಟೆಯ ಪರಿಪೂರ್ಣ ತಂಡವಾಗಬೇಕಾದರೆ ಮೇಲಿನ ಎಲ್ಲಾ ಪರಿಕರ, ಬೇಟೆಗಾರ, ಪ್ರಾಣಿ ಮತ್ತು ಇತ್ಯಾದಿ ಇರಲೇಬೇಕಾಗುತ್ತದೆ. ಒಂದು ಇನ್ನೊಂದಕ್ಕೆ ಪೂರಕವಾಗಿ ಸಂಬಂಧ ಹೊಂದಿಕೊಂಡಿರುತ್ತದೆ. ಬೇಟೆಯಲ್ಲಿ ಪ್ರಾದಿಕಾಲದ ಉಪಕರಣಗಳಿಂದ ಹಿಡಿದು ಇಂದಿನ ಯುಗದ ಗನ್‌ಗಳು ಬಳಕೆಯಲ್ಲಿವೆ. ಪ್ರದೇಶ, ಜನರ ಸ್ಥಾನಮಾನ, ಆರ್ಥಿಕ ನೆಲೆಯಲ್ಲಿ ಬೇಟೆಗಾರರು ಉಪಕರಣಗಳನ್ನು ಹೊಂದಿರುತ್ತಾರೆ. ಉಪಕರಣ ಹೊಂದಿದವರೆಲ್ಲ ಬೇಟೆಯಲ್ಲಿ ಪ್ರಾಜ್ಞರಾಗಿರುವುದಿಲ್ಲ. ಅದಕ್ಕೆ ಪರಂಪರೆಯಿಂದ ಬಂದ ಬಳುವಳಿಯೂ ಕಾರಣವಾಗಿರುತ್ತದೆ ಪರಿಕರಗಳನ್ನು ಹಿಡಿಯುವವನು ಬಿಲ್ಲುಗಾರರಾಗಿಯೂ, ಪ್ರಾಣಿಗಳನ್ನು ಬಿಲ್ಲುಗಾರರ ಬಳಿಗೆ ಓಡಿಸುವವರನ್ನೂ ಸೋವುಗಾರರೆಂದು, ತಮಟೆ, ಡೋಲು ಹಿಡಿದಿದ್ದವರನ್ನು ಓಲಗದವರೆಂದು ಕರೆಯಲಾಗುತ್ತದೆ. ಇವರೆಲ್ಲ ಬೇಟೆಯಲ್ಲಿ ಮಹತ್ವದ ಕೆಲಸ ಮಾಡುತ್ತಾರೆ.

ಬೇಟೆಯಲ್ಲಿ ನಾಯಿಗಳ ಪಾತ್ರ ಪ್ರಮುಖವಾದದು. ಬೇಟೆ ನಾಯಿಗಳೆಂದೇ ಕರೆಯಿಸಿಕೊಳ್ಳುವ ನಾಯಿಗಳು ಬೇಟೆಯಲ್ಲಿ ಪ್ರಾಣಿಗಳನ್ನು ಪತ್ತೆಹಚ್ಚಲು ಪ್ರಮುಖ ಪಾತ್ರವಹಿಸುತ್ತವೆ. ಆದರೆ ಎಲ್ಲಾ ನಾಯಿಗಳು ಬೇಟೆಗೆ ಬರುವುದಿಲ್ಲ. ತೆಳು ಸೊರಬ, ಅಗಲವಾದ ಎದೆ, ನೆಟ್ಟಗೆ ನಿಂತಿರುವ ಕಿವಿ, ಬಾಗಿದ ಹುಬ್ಬು, ದಪ್ಪಕಾಲು, ನೆಲವನ್ನು ಮುಟ್ಟಿದ ಉಗುರುಗಳಿರಬೇಕು. ಇಂಥ ನಾಯಿಗಳು ಕುದುರೆಯಂತೆ ವೇಗವಾಗಿ ಓಡಿ, ಅಡ್ಡಲಾಗಿ ಹರಿದು ಸೇವಕನಂತೆ ಆಲಸ್ಯ ಮಾಡದೆ, ಯೋಗ್ಯನಂತೆ ನಂಬಿಸಿ, ಉರಿಯು ಹರಡುವಂತೆ ಹರಡಿಕೊಳ್ಳುವವು. ಈ ನಾಯಿಗಳು ಮೃಗದ ಹೆಜ್ಜೆಯ ಗುರುತನ್ನು ಅರಿತು ಆ ದಾರಿಯಲ್ಲಿ ನುಸುಳಿ ಬೇಟೆಯಾಡುತ್ತವೆ. ಬೇಟೆಗಾರರು ಈ ಲಕ್ಷಣಗಳನ್ನುಳ್ಳ ನಾಯಿಗಳನ್ನು ಮಾತ್ರ ಬೇಟೆಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ಮೇಲಿನ ಲಕ್ಷಣ ಹೊಂದಿದ ನಾಯಿಗಳು ತಮ್ಮ ಯಜಮಾನನಿಗೆ ತೊಂದರೆ ಉಂಟಾದರೆ ತನ್ನ ಪ್ರಾಣವನ್ನೂ ಲೆಕ್ಕಿಸದೆ ರಕ್ಷಣೆಗೆ ನಿಲ್ಲುತ್ತವೆ. ಇದಕ್ಕೆ ಜನಪದರು “ನಾಯಿನಿಷ್ಠೆ” ಎಂದು ಕರೆದರು. ಹಿಂದೆ ಅರಸರು ಬೇಟೆಗೆ ಹೋಗುವಾಗ ಬೇಟೆನಾಯಿಗಳ ಪಡೆಯೇ ಅವರೊಂದಿಗೆ ಸುತ್ತುವರಿದಿರುತ್ತವೆಂಬುದನ್ನು ಪಂಪ “ಬಿಲ್ಲುಂ ಕುದುರೆಯಂ ಕಾಲಾಳುಂ ನಾಯ್ಗಳುಮಂ” ಎಂದು ಹೇಳಿದ್ದಾನೆ. ಕವಿ ಲಕ್ಷ್ಮೀಶನು ತನ್ನ ‘ಜೈಮಿನಿ ಭಾರತ’ ದಲ್ಲಿ ಎಲ್ಲಾ ರೀತಿಯ ಖಗಮೃಗಗಳನ್ನು ಬೇಟೆಯಾಡುವ ನಾಯಿಗಳು ಹೇಗಿರುತ್ತವೆಂಬುದನ್ನು ಈ ರೀತಿ ವಿವರಿಸುತ್ತಾನೆ.

*ಉಬ್ಬಿದುರುದೇರದೆಗೆದೊಡಲ ಬಾಗಿದ ಬೆನ್ನ*
*ಪಬ್ಬುಗೆಯ ಪಚ್ಚಳದ ಸೆಡೆದ ಬಾಲದ ಕೊನೆಯ*
*ಕೊಬ್ಬಿದ ಕೊರಳ ಸಣ್ಣ ಜಂಘಗಳ ಕೊಂಕುಗುರ ಮಡಗಿವಿಯ ಕಿಡಿಗಂಗಳ*
*ಹೆಬ್ಬಲ್ಲ ಬಿಡುವಾಯ ದೇಲ್ವ ಕೆನ್ನಾಲಗೆಯ*
*ಗಬ್ಬಿ ನಾಯ್ಗಳ ಹಾಸನುಗಿದು ಬಿಡೆಪಂದಿಗಳ*
*ನಬ್ಬರಿಸಿ ತುಡುಕಿದವು ಕೇಸರಿಯ ಮೇಲ್ವಾಯ್ದಡರ್ದು ಪುಲಿಯಂ ಕೊಂದವು.*

ಬೇಟೆಗಾರರು ಸಾಮಾನ್ಯವಾಗಿ ನಾಯಿಗಳನ್ನು ಬೇಟೆಯಲ್ಲಿ ಬಳಸುತ್ತಾರೆ. ಕೆಲವು ಗುಡ್ಡಗಾಡು ಪ್ರದೇಶದ ಜನರು ಬೇಟೆಯಲ್ಲಿ ಎತ್ತು, ಎಮ್ಮೆ, ದನ, ಬೆಕ್ಕು, ಕುರಿ, ಗಿಡುಗ ಮತ್ತು ಗೌಜುಗಗಳನ್ನು ಇಂದಿಗೂ ಬೇಟೆಯಲ್ಲಿ ಬಳಸುತ್ತಾರೆ. ಸಾಕಿದ ಎತ್ತು, ಎಮ್ಮೆ ದನಗಳಿಂದ ಹಕ್ಕಿಗಳನ್ನು ಹಿಡಿಯಲು ಬಳಸುತ್ತಾರೆ. ಮುಸುಕು ಧರಿಸಿದ ಬೇಟೆಗಾರರು ಎತ್ತುಗಳ ಅಥವಾ ಇತರ ಯಾವುದೇ ಸಾಕು ಪ್ರಾಣಿಯ ಮರೆಯಲ್ಲಿ ಇದ್ದು, ಪಕ್ಷಿಗಳು ಹತ್ತಿರ ಬಂದಾಗ ಹಿಡಿದುಕೊಳ್ಳುತ್ತಾರೆ. ಹುಲಿ ಬೇಟೆಯ ವೇಳೆ ಕಾಡಿನಲ್ಲಿ ಎತ್ತುಗಳನ್ನೂ, ಎಮ್ಮೆಗಳನ್ನೂ ಕಟ್ಟಿ ಹುಲಿ ಬಂದ ತಕ್ಷಣ ಮರೆಯಲ್ಲಿದ್ದ ಬೇಟೆಗಾರ ಹುಲಿಯನ್ನು ಬೇಟೆಯಾಡುತ್ತಾನೆ. ಕೆಲವು ಸಾರಿ ಈ ಪ್ರಾಣಿಗಳನ್ನು ‘ದೀಹ’ ವಾಗಿಯೂ ಉಪಯೋಗಿಸುತ್ತಾರೆ. ಬೇಟೆಯ ಆಮಿಷಕ್ಕಾಗಿ ಕಟ್ಟಿದ ಪ್ರಾಣಿಗೆ ‘ದೀಹ’ ಎಂದು ಕರೆಯುತ್ತಾರೆ. “ದೊಡ್ಡ ಬೋನಿನ ಬಾಗಿಲನ್ನು ಸೂತ್ರದ ತಂತಿಯ ಸಹಾಯದಿಂದ ತೆರೆದಿಡಲಾಗುವುದು. ಮೊದಲೇ ಬೋನಿನಲ್ಲಿ ದೀಹದ ಪ್ರಾಣಿಯನ್ನು ಕಟ್ಟಲಾಗುವುದು. ಒಂಟಿಯಾದ ದೀಹವು ಒಂದೇ ಸಮನೆ ಅರಚುತ್ತದೆ. ಈ ಅರಚುಬವಿಕೆಯನ್ನು ಕೇಳಿದ ಹುಲಿಯು ಬೋನಿನೊಳಗೆ ಪ್ರವೇಶ ಮಾಡಿ ಅದನ್ನು ಹಿಡಿಯಲು ಪ್ರಯತ್ನಿಸುತ್ತದೆ. ಹೀಗೆ ಪ್ರಯತ್ನಿಸುವಾಗ ಅದರ ಮೈ ಸೂತ್ರದ ತಂತಿಗೆ ಬೋನಿನ ಬಾಗಿಲು ಮುಚ್ಚಿಕೊಳ್ಳುತ್ತದೆ” (ಸ.ಚಿ. ರಮೇಶ್ - ೧೦೦೧ - ೮೨). ಹುಲಿ ಬೋನಿನೊಳಗೆ ಬಂದಿಯಾಗುತ್ತದೆ.

ಬೇಟೆಯಲ್ಲಿ ಬಳಕೆಯಾಗುವ ಬೆಕ್ಕು ವಿಶೇಷವಾಗಿ ದುಂಡಾದ ಮುಖವಿದ್ದು, ಉದ್ದನೆಯ ಬಳಕುವ ಶರೀರವನ್ನು ಹೊಂದಿರುತ್ತದೆ. ಬೇಟೆಗಾರ ಈ ರೀತಿಯ ಬೆಕ್ಕುಗಳನ್ನು ಹಿಡಿದು ಅವುಗಳಿಗೆ ಬೇಟೆಯ ತರಬೇತಿ ನೀಡುತ್ತಾನೆ. ಇಬುಗಳ ಸಹಾಯದಿಂದ ಮೊಲ ಮತ್ತು ಅವುಗಳಿಗೆ ಬೇಟೆಯಾಡುತ್ತಾನೆ. ಬೆಕ್ಕುಗಳು, ಪ್ರಾಣಿಗಳ ಬಿಲಗಳನ್ನು ಬಹು ಸುಲಭವಾಗಿ ನುಸುಳಿ ಅಲ್ಲಿರುವ ಸಣ್ಣಪುಟ್ಟ ಪ್ರಾಣಿಗಳನ್ನು ಹಿಡಿದು ತನ್ನ ಯಜಮಾನನಿಗೆ ಒಪ್ಪಿಸುತ್ತವೆ. ಒಮ್ಮೆ ಬೇಟೆಯನ್ನು ಬಾಯಿಯಿಂದ ಹಿಡಿದರೆ ಬೇಟೆಯ ಪ್ರಾಣಿ ಸಾಯುವವರೆಗೆ ಬಿಡುವುದಿಲ್ಲವೆಂದು ಬೇಟೆಗಾರರು ಹೇಳುತ್ತಾರೆ. ಬೇಟೆಯಲ್ಲಿ ಪ್ರಾಣಿಗಳ ಪಾತ್ರದಂತೆ ಪಕ್ಷಿಗಳ ಪಾತ್ರವೂ ಇದೆ. ಗಿಡುಗಗಳನ್ನು ಬಳಸುವ ಪರಿಣತ ಬೇಟೆಗಾರನು ಗಿಡುಗಗಳನ್ನು ಹಿಡಿದು ಅವುಗಳಿಗೆ ಬೇಟೆಯ ತರಬೇತಿ ನೀದುತ್ತಾನೆ. ಈ ಬೇಟೆಯ ಪಕ್ಷಿಗಳನ್ನು 'ಸಾಳ್ವ' ಎಂಥಲೂ ಕರೆಯುತ್ತಾರೆ. ಬೇಟೆ ಗಿಡುಗ ಸದಾಕಾಲ ಬೇಟೆಗಾರನ ಹೆಗಲ ಮೇಲೆ ಕುಳಿತಿರುತ್ತದೆ. ಬೇಟೆಗಾರ ಸೂಚನೆ ನೀಡಿದಾಗ ಅಲ್ಲಿಂದ ಹಾರಿಹೋಗಿ, ಬೇಟೆಯ ಪ್ರಾಣಿ, ಪಕ್ಷಿಗಳನ್ನು ಉರುಳಿಸಿ, ನಂತರ ತನ್ನ ಬೇಟೆಗಾರ ಯಜಮಾನನಿಗೆ ಒಪ್ಪಿಸುತ್ತದೆ.


ಬೇಟೆಯಲ್ಲಿ ಗೌಜುಗಪಕ್ಷಿ ವಿಶೇಷವಾಗಿ ಬೇಟೆಗಾರನಿಗೆ ತನ್ನ ಪರಿವಾರವನ್ನು ಹಿಡಿದುಕೊಡಲು ನೆರವಾಗುತ್ತದೆ. ಒಂದು ರೀತಿಯಲ್ಲಿ "ಮರಕ್ಕೆ ಮರ ಮೂಲ" "ಮುಳ್ಳನ್ನು ಮುಳ್ಳಿನಿಂದ ತೆಗೆ" ಎನ್ನುವ ಜನಪದರ ಮಾತುಗಳಂತೆ ಗೌಜುಗಗಳನ್ನು ಗೌಜುಗಗಳಿಂದಲೇ ಹಿಡಿಯುವ ವಿಧಾನ. ಒಂದು ರೀತಿಯಲ್ಲಿ ಊರು ಕೋಳಿಯನ್ನು ಹೋಲುವ ಇವು ಗುಂಡಾಗಿದ್ದು, ಮೊಂಡು ಬಾಲವನ್ನು ಹೊಂದಿರುತ್ತವೆ. ತಿಳಿ ಹಳದಿ ಹಾಗೂ ಕೆಂಪು ಬಣ್ಣವನ್ನು ಹೊಂದಿದ ಇದಕ್ಕೆ ಮೇಲೆಲ್ಲ ಕರಿಯ ಗೆರೆಗಳಿವೆ. ಗಾತ್ರದಲ್ಲಿ ಕೋಳಿಗಿಂತ ಚಿಕ್ಕದು. ಇದರ ಮಾಂಸ ಬಲು ರುಚಿ ಎಂದು ಹೇಳುತ್ತಾರೆ. ಈ ಪುಟ್ಟ ಪಕ್ಷಿಯ ಮಾಂಸಕ್ಕೆ ಬಹಳ ಬೇಡಿಕೆ ಇದೆ. ಹಾಗಾಗಿ ಇವು ಮಾರುಕಟ್ಟೆಯಲ್ಲಿ ಅಪಾರ ಸಂಖ್ಯೆಯಲ್ಲಿ ಕೊಂಡುಕೊಳ್ಳಲು ಸಿಕ್ಕುತ್ತವೆ. ಬೇಟೆಗೆ ಪಳಗಿಸಿದ ಗೌಜುಗ ಪಕ್ಷಿಯನ್ನು ಪಂಜರದಲ್ಲಿ ಬಂಧಿಸಿ, ಪಂಜರವು ಕಾಡಿನ ಗೌಜುಗಗಳಿಗೆ ಕಾಣದಂತೆ ಅದಕ್ಕೆ ಬಟ್ಟೆಯ ಮೇಲುಹೊದಿಕೆಯನ್ನು ಹಾಕಲಾಗುತ್ತದೆ. ಅದರ ಸುತ್ತ ಬಲೆಯ ವ್ಯೂಹವನ್ನು ರಚಿಸಲಾಗುತ್ತದೆ. ಬೇಟೆಗಾರ ತುಸುದೂರದ ಪೊದೆಯನ್ನು ಮರೆಯಾಗಿ, ಗೌಜುಗದಂತೆ ಸೀಳು ಹಾಕುತ್ತಾನೆ. ಬೇಟೆಗಾರನ ಸೀಳು ಧ್ವನಿಯನ್ನು ಪಂಜರದ ಗೌಜುಗ ಕೇಳಿಸಿಕೊಂಡು ಪ್ರತಿಯಾಗಿ ಹತ್ತಾರು ಸಾರಿ ಅನುಕರಿಸುತ್ತದೆ. ಈ ಗೌಜುಗದ ನಿಜಧ್ವನಿಯನ್ನು ಆಲಿಸಿದ ಕಾಡಿನ ಗೌಜುಗಗಳ ಹಿಂಡು ಧ್ವನಿಯತ್ತ ರಭಸದಿಂದ ನುಗ್ಗುತ್ತವೆ. ಆ ಧ್ವನಿ ಆಕ್ರಮಣಕಾರಿಯಾಗಿದ್ದರಿಂದ ಅದನ್ನು ಉಂಟುಮಾಡಿದ ಗೌಜುಗ ಪಕ್ಷಿಯ ಮೇಲೆ ಆಕ್ರಮಣ ಮಾಡಲು ಹಿಂದು ಮುಂದು ನೋಡದೆ, ಮೋಸ ಅರಿಯದೆ, ಕಡ್ಡಿಬಲೆಯಲ್ಲಿ ಬಂಧಿಯಾಗುತ್ತವೆ. ನುರಿತ ಬೇಟೆಗಾರ ಅರ್ಧ ದಿನದಲ್ಲಿ ನೂರಾರು ಗೌಜುಗಳನ್ನು ಹಿಡಿಯುತ್ತಾನೆ. ಹೀಗೆ ಗೌಜುಗಗಳನ್ನು ಶ್ರಮವಿಲ್ಲದೆ ಹಿಡಿಯುತ್ತಾ ಹೋದರೆ ಮುಂದೆ ಅವುಗಳನ್ನು ಚಿತ್ರಪಟದಲ್ಲಿ ನೋಡಬೇಕಾಗುತ್ತದೆ.

ಬೇಟೆಯಲ್ಲಿ ಜನ, ಪ್ರಾಣಿ ಹಾಗೂ ಪಕ್ಷಿಗಳ ಪಾತ್ರದಂತೆ ಪರಿಕರಗಳು ಮುಖ್ಯವೆನಿಸುತ್ತವೆ. ಮರದಿಂದ ಮಾಡಿದ ಪರಿಕರಗಳಾದ ದಡಿಗೆ, ಕಡ್ಡಿಬಲೆ, ಹಲಗೆ, ಲೋಹದಿಂದ ಮಾಡಿದ ಖಡ್ಗ, ಈಟಿ, ಕತ್ತರಿ, ತಂತಿ ಬಲೆ, ಹಾಗೆ ಲೋಹ ಮತ್ತು ಮರದಿಂದ ತಯಾರಿಸಿದ ಬೋನು, ಬಿಲ್ಲು, ಕತ್ತಿ, ಭರ್ಚಿ ಮತ್ತು ಕೋವಿ, ನಾರು ಮಾತು ದಾರದಿಂದ ತಯಾರಿಸಿದ ಹಗ್ಗ, ಬಲೆ, ಉರುಳುಗಳು, ಮೇಣ ಬಳಕೆ ಹಾಗೂ ಬೆಂಕಿಯ ಬಳಕೆಗಳು ಬೇಟೆಯನ್ನು ಸರಳಗೊಳಿಸಿ, ಬೇಟೆಗಾರನ ದೈವಗಳಾಗಿ ಪೂಜ್ಯನೀಯವಾಗಿವೆ. ಅಮವಾಸ್ಯೆ ಹುಣ್ಣಿಮೆ ಹಾಗೂ ಹಬ್ಬಗಳಲ್ಲಿ ಈ ಆಯುಧಗಳಿಗೆ ಬಲಿ ಅರ್ಪಿಸಿ, ಎಡೆಸಲ್ಲಿಸುವ ಆಚರಣೆ ಬೇಟೆಗಾರ ಸಂಸ್ಕೃತಿಯಲ್ಲಿದೆ.

ಆಯುಧಗಳು ಇಟ್ಟ ಗುರಿ ತಪ್ಪಬಾರದೆಂದು ಮಾಂತ್ರಿಕನಿಂದ ಆಯುಧ ಗಳಿಗೆ ಮುಷ್ಠ ಮಾಡಿಸಿಕೊಳ್ಳುವ ಪದ್ಧತಿ ಕಂಡುಬರುತ್ತದೆ. ಕೆಲವು ಸಾರಿ ಬೇಟೆಗಾರರೇ ಮಂತ್ರವನ್ನು ಮಾಡಿಕೊಳ್ಳುವುದು ಉಂಟು. "ಪ್ರಾಣಿಗಳನ್ನು ಮಾಟ - ಮಂತ್ರ - ತಂತ್ರಗಳಿಂದ ವಶಪಡಿಸಿಕೊಂಡು ಮಾಡುವ ಬೇಟೆ, ಪ್ರಾಣಿಗಳ ಮೂಳೆಗಳನ್ನು ಮನೆಯಲ್ಲಿ ನೇತು ಹಾಕುವುದು, ಮಿಡತೆಗಳನ್ನು ಕೂಡಿ ಹಾಕುವುದು, ಮೂಳೆಗಳನ್ನು ಸುಡುವುದರಿಂದ, ಪ್ರಾಣಿಗಳು ನಡೆದ ಹೆಜ್ಜೆಯ ಅಡಿಯ ಮಣ್ಣನ್ನು ಗಾಳಿಗೆ ತೂರುವುದರಿಂದ ಇನ್ನೂ ಮುಂತಾದ ತಂತ್ರಗಳಿಂದ ಪ್ರಾಣಿಗಳನ್ನು ವಶಪಡಿಸಿಕೊಳ್ಳುವಿಕೆ" (ಸ.ಚಿ. ರಮೇಶ್ -೨೦೦೧-೧೯೦). ಹಸು, ಎಮ್ಮೆ, ಎತ್ತು ಇತ್ಯಾದಿ ಸಾಕು ಪ್ರಾಣಿಗಳನ್ನು ಬೇಟೆಯ ಆಯುಧದಿಂದ ಅಥವಾ ಗುಂಡಿನಿಂದ ಹೊಡೆದ ಆ ಆಯುಧಕ್ಕೆ 'ಭಾಂಗು' ಬರುತ್ತದೆ. ಅಂದರೆ ಬೇಟೆಯಲ್ಲಿ ಆ ಆಯುಧ ಹಿಡಿದ ವ್ಯಕ್ತಿಯ ಬಳಿ ಯಾವ ಪ್ರಾಣಿಯೂ ಸುಳಿಯುದಿಲ್ಲ. ಒಂದು ವೇಳೆ ಬಂದರೂ ಗುರಿ ಬೀಳುವುದಿಲ್ಲ. ಕೊಡಗಿನ ಭಾಗದಲ್ಲಿ ಗುಬ್ಬಿ, ಹದ್ದು, ಅಳಿಲು, ದನಕರುಗಳು, ಕಾಡು ಕೋಳಿ, ಇಲಿ, ಹಾವು, ನವಿಲು ಇವುಗಳನ್ನು ಗುಂಡಿಟ್ಟು ಕೊಲ್ಲುವುದಿಲ್ಲ. ಹಾಗೆಯೇ ತೆಂಗಿನ ಮರ ಹಾಗೂ

ಅರಳೀಮರದ ಮೇಲಿರುವ ಯಾವುದೇ ಪ್ರಾಣಿ ಪಕ್ಷಿಗಳನ್ನು ಕೊಲ್ಲುವ ಹಾಗಿಲ್ಲ. ತೆಂಗು "ಕಲ್ಪವೃಕ್ಷ" ಅರಳೀ ದೈವವೃಕ್ಷ ಎಂಬುದು ಅವರ ನಂಬಿಕೆ. ಅಲ್ಲಿಯ ಬೇಟೆಯ ದೈವ ಬೋತೆಕಾರ ಅಯ್ಯಪ್ಪನಾಗಿದ್ದಾನೆ. ಅದು ಅಲ್ಲಿನ ಮನೆ ದೇವತೆಯು ಹೌದು. ಅದನ್ನು "ಸಾರ್ಥವು" ಎಂದು ಕರೆಯುತ್ತಾರೆ. ಈ ಬೇಟೆ ದೇವತೆ ಬೇಟೆಯನ್ನು ಒದಗಿಸುವುದಲ್ಲದೇ ಆಯುಧಗಳ ಗುರಿಯನ್ನು ನಿಯಂತ್ರಿಸುತ್ತದೆ ಎಂದು ನಂಬುತ್ತಾರೆ. "ಆಗಾಗ, ಹೊಡೆದ ಗುಂಡು ಗುರಿ ತಪ್ಪುತ್ತಿದ್ದರೆ ಮಂತ್ರಿಸಿದ ಕೋಳಿ ಮೊಟ್ಟೆಗೆ ಗುಂದು ಹೊಡೆದು ಕೋವಿಯ 'ದೃಷ್ಟಿ ತೆಗೆಯುವುದು' ಜನರಲ್ಲಿರುವ ಒಂದು ನಂಬಿಕೆ. ಇದಕ್ಕೆ 'ಮುಟ್ಟಿ' ಮಾಡುವುದು ಎನ್ನುತ್ತಾರೆ" (ಐನಂಡ ಎಂ. ಧನು ೨೦೦೦-೪೪). ಮಲೆನಾಡಿನ ಭಾಗಗಳಲ್ಲೂ ಇದು ಕಂಡುಬರುತ್ತದೆ. "ಸಕಲೇಶಪುರ ಭಾಗದಲ್ಲಿ ಅರಣ್ಯ ಪ್ರವೇಶಿಸುವ ಮೊದಲು ಪಂಜರವಳ್ಳಿ ದೈವಗಳನ್ನು ಸ್ಮರಿಸಿಕೊಂಡು ಬೇಟೆಗೆ ಕೊಂಡೊಯ್ಯುಲಿರುವ ಸಾಧನಗಳನ್ನೆಲ್ಲ ಒಂದೆಡೆ ಇಟ್ಟು ಪೂಜಿಸಿ ಒಳ್ಳೆಯ ಬೇಟೆ ಸಿಕ್ಕಲಿ ಎಂದು ಪಾರ್ಥಿಸಿ ಕೊಳ್ಳುವರು. ಯಾವುದೇ ಅಡ್ಡಿ ಆತಂಕಗಳು ಒದಗದಿರಲೆಂದು ಮಂತ್ರವಾದಿಗಳಿಂದ "ತಡೆ ಒಡೆಸುವರು", ಅನಂತರ ಕಾಡಿನ ದೇವತೆಯಾದ ಕಾಡ್ಲ ಒಡೆಯ ಮತ್ತು ಚೌಡಿಯನ್ನು ಹಣ್ಣು ಕಾಯಿ ಇಟ್ಟು ಪೂಜಿಸುವರು. ವರ್ಷಕೊಮ್ಮೆ 'ಬೇಟೆ ಮಂಜ' ಎಂಬ ಬೇಟೆ ದೇವತೆಯನ್ನು ಪ್ರಾರ್ಥಿಸಿಕೊಳ್ಳುವರು" (ಯು.ಎಸ್. ರಾಮಣ್ಣ, ೨೦೦೦-೨೮).ಪ್ರಾದೇಶಿಕವಾಗಿ ಭಿನ್ನ ಜನವರ್ಗದ ಬೇಟೆಗಾರ ಸಂಸ್ಕೃತಿಯಲ್ಲಿ ವಿಭಿನ್ನ ಆಯುಧಗಳು ಬಳಕೆಯಾಗುತ್ತವೆ. ಉದಾ: ಬಿಲ್ಲು, ಬಾಣ, ಭರ್ಜಿ, ಕತ್ತಿ, ಕೊಡಲಿ, ಗಂಡುಕೊಡಲಿ, ಚಿಪ್ಪುಗೊಡಲಿ, ಕುಡುಗೋಲು, ಈಟಿ, ಕೋವಿ, ಮಚ್ಚು, ಕೇವಿನಕೋವಿ, ತೋಟ ಕೋವಿ, ದಂಡ, ಕಲ್ಲು ಹಾರೆ, ಖಡ್ಗ, ಕಠಾರಿ ಇತ್ಯಾದಿ. ಹೀಗೆ ಹತ್ತಾರ ಆಯುಧಗಳು ಆಯಾಯಾ ಬೇಟೆಗಾರ ಸಂಸ್ಕೃತಿ ನೆಲೆಯಲ್ಲಿ ಪ್ರಾಮುಖ್ಯತೆ ಪಡೆಯುತ್ತವೆ. ಬೇಟೆಯಲ್ಲಿ ಬಳಕೆಯಾಗುವ ಹೆಚ್ಚಿನ ಆಯುಧಗಳು ನಿತ್ಯ ಕೆಲಸ ಕಾರ್ಯಗಳಲ್ಲಿಯೂ ಬಳಕೆಯಾಗುತ್ತವೆ. ಉದಾಹರಣೆಗೆ ಕತ್ತಿ, ಕೊಡಲಿ, ಕುಡುಗೋಲು, ಹಾರೆ, ಇತ್ಯಾದಿ. ನಿತ್ಯಜೀವನದಲ್ಲಿ ಉಪಯೋಗವಾಗುವ ಪರಿಕರಗಳನ್ನು ಬಿಟ್ಟು ಬೇಟೆಯಲ್ಲಿ ಮಾತ್ರ ಉಪಯೋಗವಾಗುವ ವಸ್ತುಗಳನ್ನು ಬೇಟೆ ಮುಗಿದ ನಂತರ ಅವುಗಳ ಸ್ಥಾನದಲ್ಲಿ ಸುರಕ್ಷಿತವಾಗಿಡುತ್ತಾರೆ. ಆಯುಧಗಳನ್ನು ಮುಟ್ಟುವುದಾಗಲಿ, ಒದೆಯು ದಾಗಲಿ ಮಾಡುವುದಿಲ್ಲ. ಅವುಗಳಿಗೆ ಮೈಲಿಗೆಯಾದರೆ ಗುರಿ ಶಕ್ತಿಯನ್ನು ಕಳೆದುಕೊಳ್ಳುತ್ತವೆ ಎಂದು ನಂಬುತ್ತಾರೆ.

ಬೇಟೆ ಹಲವು ಕಾರಣಗಳಿಗಾಗಿ ನಡೆಯುತ್ತದೆಂದು ಅಧ್ಯಯನದಿಂದ ತಿಳಿದು ಬಂದ ಸತ್ಯ. ಬೇಟೆ ಪ್ರಾದಿಮ ಕಾಲದಲ್ಲಿ ಮಾನವನಿಗೆ ಮಾಡಿದ ಉಪಕಾರವನ್ನು, ಇಂದು ಮಾಡುತ್ತಿರುವ ಅಪಕಾರ ನಮ್ಮೆಲ್ಲರ ಅರಿವಿನಲ್ಲಿದೆ. ಅದು ಇಂದು ಆಚರಣೆ, ಅನುಕರಣೆ ಇತ್ಯಾದಿಯಾಗಿ ರೂಪಾಂತರ ಹೊಂದುತ್ತಿದೆ. ಈ ಬೇಟೆ ಹಲವು ಕಡೆ ಇಂದಿಗೂ ರೂಢಿಯಲ್ಲಿದೆ. ಅವುಗಳನ್ನು ಅಧ್ಯಯನದ ದೃಷ್ಟಿಯಿಂದ ನಾಲ್ಕು ಭಾಗಗಳಾಗಿ ವಿಭಾಗಿಸಿಕೊಳ್ಳಬಹುದು.



ಬೇಟೆಯಲ್ಲಿ ಪ್ರಾಣಿ ಬೇಟೆ ಮಾಡುವಾಗ ಸಮುದಾಯದ ಸಹಕಾರ ಅಗತ್ಯ. ಬೇಟೆಗಾರರು ಪ್ರಾಣಿಗಳ ಚಲನವಲನಗಳನ್ನು ಅವುಗಳ ಹೆಜ್ಜೆ, ಕೂಗು ಇತ್ಯಾದಿಗಳಿಂದ ಗುರುತಿಸುವ ಜಾಣ್ಮೆ ಹೊಂದಿದವರಾಗಿರುತ್ತಾರೆ. ಯಾವ ಪ್ರಾಣಿಶಾಸ್ತ್ರಜ್ಞರಿಗೇನು ಕಡಿಮೆ ಇಲ್ಲದಂತೆ ಪ್ರಾಣಿಗಳ ಬಗೆಗೆ ನಿಖರವಾಗಿ ಹೇಳುವ ಪ್ರಜ್ಞೆಯನ್ನು ಹೊಂದಿರುತ್ತಿದ್ದರು. ಇದನ್ನು ಪ್ರಾಣಿಶಾಸ್ತ್ರೀಯ ಅಧ್ಯಯನಕಾರರು ಗಮನಿಸಿದರೆ ಆ ಅಧ್ಯಯನಕ್ಕೆ ಅನೇಕ ಮಾಹಿತಿ ಹಾಗೂ ವಿವರಗಳು ಸಿಕ್ಕುತ್ತವೆ. ಬೇಟೆಗಾರ ಪ್ರಾಣಿಗಳ ಚಟುವಟಿಕೆಯ ಜ್ಞಾನ ಭಂಡಾರವೇ ಸರಿ. "ಯಾವ ಪ್ರಾಣಿ ಯಾವಾಗ ಚಟುವಟಿಕೆಯಿಂದಿರುತ್ತದೆ. ಯಾವಾಗ ಹೊರಗೆ ಬರುತ್ತದೆ. ಯಾವ ಆಹಾರ ಪ್ರಿಯವಾದುದು, ಯಾವಾಗ ಪುಷ್ಟಿಯಾಗಿ ಬೆಳೆದಿರುತ್ತದೆ ಇತ್ಯಾದಿ ಅಂಶಗಳನ್ನು ಬಲ್ಲವರಾಗಿರುತ್ತಾರೆ. ಆದುದರಿಂದ ಬೇಟೆಯ ತಂತ್ರವನ್ನು ಆಯಾ ಪ್ರಾಣಿಯ ಸ್ವಭಾವಕ್ಕನುಗುಣವಾಗಿ ರೂಪಿಸಿಕೊಂಡಿರುತ್ತಾರೆ" (ಯು.ಎಸ್. ರಾಮಣ್ಣ - ೨೦೦೧-೨೨). "ಹುಲಿಗೆ ಕಿವಿ, ಕಣ್ಣು ಸೂಕ್ಷ್ಮ, ಹಂದಿಗೆ ಮೂಗು ಸೂಕ್ಷ್ಮ, ಕಾಡಿನಲ್ಲಿ ಹಣ್ಣುಗಳು ಉದುರಿದ್ದರೆ ಅದನ್ನು ತಿನ್ನಲು ಜಿಂಕೆಗಳು ಬರುತ್ತವೆ. ಕಾಡುಹಂದಿ ಕಬ್ಬಿನ ಗದ್ದೆಗೆ ಬರುತ್ತದೆ. ಕಾಡುಕುರಿಗಳು ಚೂರಿ ಕಾಯಿ, ಕಣಗಲು ಹಣ್ಣುಗಳು ಚುಂಗೋಳಿ ಹಣ್ಣು, ಅಮಟೆಹಣ್ಣು ತಿನ್ನಲು ಬರುತ್ತವೆ. ಹಾರ್ ಬೆಕ್ಕು ಭತ್ತ ತಿನ್ನಲು ಬರುತ್ತದೆ. ಉಡ ಸಿಕ್ಕಿದಾಗ ಅದರ ಕಾಲು ಕೈ ಕತ್ತರಿಸಿ ತರಬೇಕು. ಚಿಪ್ಪಿನ ಹಂದಿ ಹೊಡೆದಾಗ ಅದು ಮುದುರಿಕೊಳ್ಳುವುದು. ಅದರಿಂದ ಅದನ್ನು ತೆಗೆದುಕೊಂಡು ಬರುವಾಗ ಹೊಡೆಯುತ್ತಲೇ ಬರಬೇಕು. ಮಲೆಗಾಲವು ಮೀನು ಶಿಕಾರಿಗೆ ಪ್ರಶಸ್ತವಾದುದು ಇತ್ಯಾದಿ ಹತ್ತಾರು ಸಂಗತಿಗಳ ಜ್ಞಾನ ಬೇಟೆಗಾರರಿಗಿರುತ್ತದೆ" (ಯು.ಎಸ್. ರಾಮಣ್ಣ - ೨೦೦೧-೨೨).

ಎಲ್ಲಾ ಸಂದರ್ಭದಲ್ಲಿಯೂ ಜನಪದರಿಗೆ ದೇವರು ಬೇಕು. ಏನೇ ಕೆಲಸ ಮಾಡುವ ಮೊದಲು ದೇವರನ್ನು ಪ್ರಾರ್ಥಿಸಿಕೊಳ್ಳುವುದು ಅವರ ರೂಢಿ. ಹಾಗೆಯೇ ಬೇಟೆಗೆ ಹೋಗುವಾಗಲು ಬೇಟೆ ದೇವರನ್ನು ಪೂಜಿಸಿ ಬೇಟೆ ಸಿಗಲೆಂದು ಪ್ರಾರ್ಥಿಸುತ್ತಾರೆ. ಕೊಡಗಿನ ಕಡೆ ಬೇಟೆಗೆ ಹೋಗುವಾಗ ಬೇಟೆಗಾರರು ಅಯ್ಯಪ್ಪ ದೇವರ ಹೆಸರಿಡಿದು ಕರೆಯುವ ಪದ್ಧತಿ ಇದೆ. ಬೇಟೆ ಸಿಕ್ಕದೆ, ಊರಿನವರ ಅಪಮಾನಕ್ಕೆ, ಕಿಡಿನುಡಿಗೆ ಗುರಿಯಾಗದೇ, ಬೇಟೆ ಸಿಕ್ಕಲಿ ಎನ್ನುವ ಉದ್ದೇಶದಿಂದ ಈ ಆಚರಣೆ ಚಾಲ್ತಿಯಲ್ಲಿದೆ. "ಯಾವುದೇ ದೇವತೆಯ ನಿರಾಕಾರ ವಿಗ್ರಹದೆದುರು ಅನೇಕ ಕಬ್ಬಿಣದ ತ್ರಿಶೂಲಗಳಿರುವುದು ಸಾಮಾನ್ಯ. ಅರಣ್ಯವಾಸಿ ದೇವತೆಗಳಿಗೆ ಗುಡಿಕಟ್ಟುವುದು ನಿಷೇಧ. ಕೆನ್ನಾಯಿಗಳನ್ನು ಹೋಲುವ ನಾಯಿಯ ಮಣ್ಣಿನ ರೂಪವನ್ನು ಕುಂಬಾರನಿಂದ ಮಾಡಿಸಿ ದೇವರಿಗೆ ಒಪ್ಪಿಸುತ್ತಾರೆ. ಹೀಗೆ ಹರಕೆ ಒಪ್ಪಿಸಲು ಕಾರಣಗಳು : ೧. ತಾನು ಸಾಕಿರುವ ಬೇಟೆ ನಾಯಿಗೆ ಇದ್ದಕ್ಕಿದ್ದಂತೆ ರೋಗರುಜಿನ ಬಂದರೆ ೨. ಬೇಟೆಯ ಕಾಲದಲ್ಲಿ ಅಕಸ್ಮಾತ್ ಯಾವುದೇ ಬೇಟೆಗಾರನಿಂದ ಬೇಟೆ ನಾಯೀಗೆ ಗುಂಡೇಟು ತಗುಲಿ ಅದು ಸತ್ತು ಹೋದರೆ ೩. ಬೇಟೆಯ ಮೃಗದ ಧಾಳಿಗೆ ಸಿಕ್ಕಿ ನಾಯಿ ಸತ್ತು ಹೋದರೆ ೪. ಬೇಟೆ ಕಾಲದಲ್ಲಿ ಯಾವುದೇ ಆಪತ್ತು ಒದಗದಂತೆ ರಕ್ಷಣೆ ನೀಡುವಂತೆ ದೇವರನ್ನು ಬೇಡಿಕೊಳ್ಳುವಾಗ ಮಣ್ಣಿನ ನಾಯಿಯ ರೂಪವನ್ನು ಕೊಡುತ್ತೇವೆಂದು ಹರಕೆ ಮಾಡಿಕೊಳ್ಳುತ್ತಾರೆ" (ಐನಂಡ ಎಂ.ಧನು - ೨೦೦೧-೪೫).


ಬಯಲು ಸೀಮೆಯ ನಾಯಕ ಜನಾಂಗದವರು ಬೇಟೆಯನ್ನು ಸಂಪ್ರದಾಯಬದ್ಧವಾಗಿ ನಡೆಸುವ ರೂಢಿ ಇಟ್ಟುಕೊಂಡಿದ್ದಾರೆ. ಅವರು ತಮ್ಮ ಇಷ್ಟ ದೇವತೆಯಿಂದ 'ಹೂವು ಕೇಳಿ' ಬೇಟೆಗೆ ಹೊರಡುತ್ತಾರೆ. "ಬೇಟೆಗೆ ಹೊರಡುವ ಮುನ್ನ ಪಟ್ಟಲದಮ್ಮ, ಗೌಡಗೆರಮ್ಮನಿಗೆ ಪೂಜೆ ಸಲ್ಲಿಸಿ ಹೊರಡುವುದು ವಾಡಿಕೆ. ಈ ದೇವರ ಹೆಸರಿನಲ್ಲಿ ಬಂದು ಕೋಡಗಲ್ಲನಿಟ್ಟು, ಅರಿಶಿನ ಕುಂಕುಮ, ಹೂವುಗಳಿಂದ ಪೂಜಿಸಿ, ಹೂವು ಕೇಳಿ (ದೇವರ ತಲೆಯ ಮೇಲಿಂದ ಹೂವು ಬೀಳುವುದು) ಹೂ ಕೊಟ್ಟ ನಂತರ, ಯಾವ ಅಪಾಯವೂ ಇಲ್ಲದಂತೆ, ಸುಲಭವಾಗಿ ಬೇಟೆ ಸಿಗುವಂತೆ ದೇವರನ್ನು ಪ್ರಾರ್ಥಿಸಿ, ಜಯಕಾರ ಹಾಕಿ ಬೇಟೆಗೆ ಹೊರಡುತ್ತಾರೆ" (ಎಂ.ಎಸ್. ಪ್ರಕಾಶ್ -೨೦೦೦-೧೪). ಮಲೆನಾಡಿನ ಪ್ರದೇಶದಲ್ಲಿ ಬೇಟೆಗೆ ಹೋಗುವ ಮುನ್ನ ಮರದಿಂದ ಮಾಡಿದ ಹಂದಿ ಮೂರ್ತಿಯನ್ನು ಪೂಜಿಸುವ ಆಚರಣೆಯೊಂದು ನಡೆಯುತ್ತದೆ. ಬೇಟೆಯಲ್ಲಿ ಹಂದಿ ದೊರೆತರೆ ಅದರ ತಲೆಯನ್ನು ಕತ್ತರಿಸಿ ಅದರ ಕೊಬ್ಬಿನಿಂದಲೇ ದೀಪ ಉರಿಸಿ ಪೂಜೆ ಸಲ್ಲಿಸುವ ಪದ್ಧತಿಯು ಇದೆ. "ಕಾಡಿಗೆ ಹೋಗುವ ಮೊದಲು ಅರಣ್ಯ ದ್ವಾರದಲ್ಲಿ ಕಲ್ಲಿನಿಂದ ನಿರ್ಮಿಸಿದ ಹಂದಿಯಾಕಾರದ ಬೇಟೆರಂಗನ ಮೂರ್ತಿಗಳನ್ನು ಸ್ಥಾಪಿಸಿ ಪೂಜಿಸಲ್ಲಿಸುವರು. ಆ ಸಮಯದಲ್ಲಿ "ನಿನ್ನ ಹಾಗೆ ನಿನ್ನ ಮಕ್ಕಳು, ಮೊಮ್ಮಕ್ಕಳು ನಮಗೆ ಸಿಕ್ಕುತ್ತಿರಲಿ" ಎಂದು ಬೇಡಿಕೊಳ್ಳುವರು. ಬೇಟೆಯ ಸಮಯದಲ್ಲಿ ಹಂದಿಯೇ ಸಿಕ್ಕಿದಲ್ಲಿ, ಅದರ ತಲೆಯನ್ನು ಕತ್ತರಿಸಿ, ಬೇಟೆ ರಂಗನ ಮುಂದಿಟ್ಟು, ಅದರ ಮಸೂಡಿಗೆ ಹತ್ತಿ ಬತ್ತಿ ಇಟ್ಟು ಹಂದಿಯು ಕೊಬ್ಬಿನಿಂದಲೇ ದೀಪ ಹಚ್ಚುವ ಸಂಪ್ರದಾಯವಿದೆ. ಹೀಗೆಯೇ ಬೇಟೆ ಸಿಕ್ಕುತ್ತಿದ್ದರೆ ಪೂಜೆ

ಮಾಡುವುದಾಗಿ, ಮತ್ತೊಮ್ಮೆ ಹಿಂದಿನ ರೀತಿಯಲ್ಲಿ ಹೇಳಿ ಧೂಪ ಹಾಕುತ್ತಾರೆ." (ಯು.ಎಸ್. ರಾಮಣ್ಣ - ೨೦೦೧-೨೫). ಈ ಬಗೆಯ ಆಚರಣೆಗಳನ್ನು ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ, ಚಿಕ್ಕಮಗಳೂರಿನ ಪ್ರದೇಶಗಳಲ್ಲಿ ಈಗಲೂ ನೋಡಬಹುದು.

ಬೇಟೆ ಸಮುದಾಯದಲ್ಲಿ ಹಂದಿಯು ಬೇಟೆ ರಂಗನಾಗಿಯೂ, ಬಲಿಯಾಗಿಯೂ, ನೈವೇದ್ಯವಾಗಿಯೂ ಮತ್ತು ಆಹಾರವಾಗಿಯೂ ಇರುವುದನ್ನು ನೋಡಿದರೆ ಅದರ ಆಂತರ್ಯದಲ್ಲಿ ಯಾವುದೋ ಬೆಲೆ ಬಾಳುವಂಥದ್ದು ಇರಲೇಬೇಕಲ್ಲವೇ? ಮಲೆನಾಡಿನ ಹಲವು ಕಡೆ ಜನಪದ ದೈವಗಳಿಗೆ ಹಂದಿಯನ್ನೇ ಬಲಿ ಕೊಡಬೇಕು. ಇದಕ್ಕೆ ಬನದ ದೇವತೆಗಳಿಗೆ ಹಾಗೂ ಚೌಡಿ ದೇವತೆಗಳನ್ನು ಉದಾಹರಿಸಬಹುದು. ವಿಜಯನಗರ ಅರಸರ ರಾಜ್ಯಲಾಂಛನ ಹಂದಿ (ವರಹ) ಮಹಾವಿಷ್ಣುವಿನ ಅವತಾರವೆಂಬುದು ಸಾರ್ವತ್ರಿಕವಾಗಿ ನಂಬುಗೆ. ಹಂದಿಯು ತುಳುನಾಡಿನಲ್ಲಿ 'ಪಿಲಿಪಂಜಿ' ದೈವವಾಗಿಯೂ, ಮಲೆನಾಡಿನಲ್ಲಿ ಬೇಟೆರಂಗನಾಗಿಯೂ, ಉತ್ತರ ಕರ್ನಾಟಕದ ಕೆಲವು ಜನವರ್ಗದವರಿಗೆ ಲಕ್ಷ್ಮಿಯಾಗಿಯೂ ಇರುವುದು ಹೊಸ ಚಿಂತನೆಯತ್ತ ಬೆಳಕು ಚೆಲ್ಲುತ್ತದೆ. ಮೇಲಿನ ವಾದದಲ್ಲಿ ನಾವು ಗಮನಿಸಿದ ಸಮಾನ ಅಂಶಗಳೆಂದರೆ ಬಲಿ ಮತ್ತು ಆಹಾರ. ಎಲ್ಲೋ ಒಂದು ಕಡೆ ಇವೆರಡಕ್ಕೂ ಸಂಬಂಧ ಇದ್ದಂತೆ ತೋರುತ್ತದೆ. ಇದನ್ನು "ಕೋಟಿ ಕೊಟ್ಟಾದರೂ ಗೂಟಿ ತಿನ್ನು" ಎಂಬ ಜನಪದರ ಗಾದೆಮಾತಿನ ಮೂಲಕ ಅರ್ಥೈಸಬಹುದು. ಹಂದಿಯ ಮಾಂಸದ ಭಕ್ಷಣೆಯ ಮಹತ್ವದ ಮೇಲೆ ಬೆಳಕು ಚೆಲ್ಲುತ್ತದೆ. ಹೆಚ್ಚಾಗಿ ಆಷಾಢದ ದಿನಗಳಲ್ಲಿ ತಿನ್ನುವುದು ಹೆಚ್ಚು. ಈ ದಿನ ಮಾನಗಳಲ್ಲಿ ಗಾಳಿಯ ಒತ್ತಡ ಜಾಸ್ತಿಯಿರುತ್ತದೆ, ಈ ವೇಳೆಯಲ್ಲಿ ಮನುಷ್ಯನಿಗೆ ಕೊಬ್ಬಿನ ಅಂಶ ಹೆಚ್ಚು ಬೇಕು. ಹಂದಿ ಮಾಂಸ ಭಕ್ಷಣೆ ಮನುಷ್ಯನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದೇ ಅವುಗಳ ಪೂಜೆ ಹಾಗೂ ಬಲಿಗೆ ಕಾರಣವಾಗಿದೆ. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಹಂದಿಯ ಬಲಿ ಮತ್ತು ಪೂಜೆಯನ್ನು ನೋಡಬಹುದು.

**ಮಾಂಸದ ಹಂಚಿಕೆ**

ಬೇಟೆಯಲ್ಲಿ ದೊರೆತ ಪ್ರಾಣಿಯ ಮಾಂಸದ ಹಂಚಿಕೆಯು ವಿಶಿಷ್ಟವಾಗಿದೆ. ಯಾವುದೇ ರೀತಿಯ ಆಧುನಿಕ ತೂಕದ ವಸ್ತುಗಳನ್ನು ಬಳಸದೇ ಬರಿಯ ಕೈ ಅಂದಾಜಿನ ಮೇಲೆ ಹಂಚಿಕೊಳ್ಳಲಾಗುತ್ತದೆ. ಬೇಟೆಯಲ್ಲಿ ಭಾಗವಹಿಸಿದ ನಾಯಿಗಳು, ಜನ ಹಾಗೂ ಕೋವಿಗಳಲ್ಲದೆ, ಬೇಟೆಯನನ್ನುರುಳಿಸಿದ ಬೇಟೆಗಾರರಿಗೆ ವಿಶೇಷ ಪಾಲು ನೀಡಲಾಗುತ್ತದೆ. ಬೇಟೆಯಲ್ಲಿ ಬೇಟೆ ದೊರಕಿಸಿಕೊಟ್ಟ ದೈವಕ್ಕೆ 'ಕೊಡಸು' ಹಾಗೂ ಹುರಿತುಂಡಿನ ನೈವೇದ್ಯವನ್ನು ತಪ್ಪದೇ ಅರ್ಪಿಸುತ್ತಾರೆ. ಗ್ರಾಮದ ಆಡಳಿತಕ್ಕೊಳಪಟ್ಟ ಕಾಡಿನ ಆಡಳಿತಾಧಿಕಾರಿಗಳಾದ ಗೌಡ, ಪಟೇಲರಗಳಿಗೂ ಪಾಲು ನೀಡಬೇಕೆನ್ನುವ ಅಲಿಖಿತ ನಿಯಮವಿದೆ. ಮಲೆನಾಡಿನ ಭಾಗವ ಬೇಟೆಗಾರರು ಕೆಳಗಿನ ಕ್ರಮದಲ್ಲಿ ಮಾಂಸವನ್ನು ಹಂಚಿಕೊಳ್ಳುತ್ತಾರೆ.



ಲೇಸು ಮತ್ತು ಬೀವಿನ ಪಾಲುಗಳನ್ನುಳಿದ ಪಾಲುಗಳು ಒಂದೇ ಅಳತೆಯಲ್ಲಿರುತ್ತವೆ. ತುಳುನಾಡಿನ ಕಡೆ ಪ್ರಾಣಿಗಳನ್ನು ಕಾಡಿನಿಂದ ನಾಡಿನ ಕಡೆಗೆ ಸಾಗಿಸುವವರನ್ನು ಹೊಂತಕಾರಿಗಳೆಂದು ಕರೆಯುತ್ತಾರೆ. ಮಾಂಸವನ್ನು ಪಾಲು ಮಾಡುವವನನ್ನು ಮಲೆನಾಡಿನ ಭಾಗಗಳಲ್ಲಿ ಸೊಂಟಮುರುಕನೆಂದು ಕರೆಯುತ್ತಾರೆ. ಬೇಟೆಯ ವಲಯದೊಳಗೆ ಹಂಪಿನ ಸ್ಥಳ, ಬೇಟೆರಂಗ, ಕೊದಸು ಹುರಿತುಂಡು ಇತ್ಯಾದಿಗಳು ಮಹತ್ವದ ಸ್ಥಾನ ಪಡೆದಿರುತ್ತವೆ. ಬೇಟೆ ದೇವನಿಗೆ ಹುರಿತುಂಡು ಹಾಗೂ ಹಸಿ ಮಾಂಸದ ಕೊದಸನ್ನು ಅರ್ಪಿಸಿ ಪೂಜೆ ಸಲ್ಲಿಸಲಾಗುತ್ತದೆ. ಬೇಟೆರಂಗನಿಗೆ 'ಕರಕಲುಕಡ್ಡಿ' ಅರ್ಪಿಸುವ ಪದ್ಧತಿಯು ಕೆಲವು ಭಾಗಗಳಲ್ಲಿ ಕಂಡುಬರುತ್ತದೆ. "ತೀರ್ಥಹಳ್ಳಿ ಸುತ್ತಲಿನಲ್ಲಿ ಹಸಿಗೆಯಾದ ಮೇಲೆ ಸ್ವಲ್ಪ ಭಾಗ ಮಾಂಸವನ್ನು ತೆಗೆದುಕೊಂಡು ಉಪ್ಪು ಕಾರ ಹಾಕಿ ಬೇಯಿಸಿ ಹುರಿತುಂಡು ಮಾಡಿ ಉಳಿದ ಮಾಂಸವನ್ನು ಒಂದು ಬುಟ್ಟಿಗೆ ತುಂಬಿಸಿ ಬೇಟೆರಂಗನ ಪೂಜೆಗೆ ಅಣಿಗೊಳಿಸುವರು. ಚಿಕ್ಕಮಗಳೂರು ಭಾಗದಲ್ಲಿ ಕೆಲವು ಕಡೆ ಬೇಟೆರಂಗನಿಗೆ ಕಾಡ್ಲ ಒಡೆಯನಂತೆ ನಿರ್ದಿಷ್ಟ ಆಕಾರವಿಲ್ಲ. ಆದುದರಿಂದ ಫಲ ಬಿದುವ ವೃಕ್ಷದ ಕೆಳಗೆ ಒಂದು ಕಲ್ಲು ಇಟ್ಟು ಬೇಟೆರಂಗನ ಹೆಸರು ಹೇಳಿ ಆವಾಹನೆ ಮಾಡುವರು" (ಯು.ಎಸ್. ರಾಮಣ್ಣ -೨೦೦೧-೧೬-೧೭) ಮಾಂಸದ ಎಲ್ಲಾ ಪಾಲು ರಾಶಿಯನ್ನು ಮಾಡಿ ಮುಗಿಸಿದ ನಂತರ ಐದು ಅಥವಾ ಒಂಬತ್ತು ಜಾತಿಯ ಎಲೆಗಳ ಮೇಲೆ ಹಸಿಮಾಂಸದ ತುಂಡುಗಳನ್ನು ಇಟ್ಟು ಪೂಜೆ ಸಲ್ಲಿಸಲಾಗುತ್ತದೆ. ಅಂದಿನ ಬೇಟೆಯನ್ನು ಕೊಂದ ಕೋವಿಯಿಂದ ಅದೇ ಬೇಟೆಗಾರರು ಆಕಾಶದ ಕಡೆಗೆ ಗುಂಡು ಹಾರಿಸುತ್ತಾನೆ. ನಂತರ ಆತನು ಧೂಪ ಹಾಕಿಕೊಳ್ಳುತ್ತಾನೆ. ಉಳಿದ ಬೇಟೆಗಾರರು ಧೂಪ ಹಾಕಿಕೊಂಡು ಹೀಗೆಯೇ ಮುಂದೆ ಒಳ್ಳೆಯ ಬೇಟೆ ಸಿಕ್ಕಲಿ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ನಂತರ ಎಲ್ಲರಿಗೂ ಮಾಂಸ ಮತ್ತು ಹುರಿತುಂಡು ಪಾಲುಗಳನ್ನು ನೀದಲಾಗುವುದು. ಕೊನೆಯಲ್ಲಿ ಹಂಪಿಗೆ ಹಾಸಿದ ಬಾಳೆ ಎಲೆಯನ್ನು ತೆಗೆಯುವ 'ಹಂಪು ಕೊಚ್ಚುವುದು' ಎನ್ನುವ ಪದ್ಧತಿ ನಡೆಯುತ್ತದೆ.

ಮಲೆನಾಡಿನ ಪ್ರದೇಶದಲ್ಲಿ ಈ ಪದ್ಧತಿ ಇದೆ. "ಹಸಿಗೆ ನಡೆದ ಜಾಗದಿಂದ ನಿರ್ಗಮಿಸುವ ಮುನ್ನ "ಹಂಪು" ಹಾಸಿದ ವ್ಯಕ್ತಿ ಹಂಪು ಕೊಚ್ಚಬೇಕು. ಹಾಸಿದ ಬಾಳೆ ಎಲೆಗಳನ್ನು ಆತ ಒಟ್ಟು ಮಾಡಿ ಉರಿಯುವ ಕೊಳ್ಳಿಯ ಮೇಲಿರಿಸಿದ್ದ 'ಕೊಚ್ಚುಮರದ' ಮೇಲೆ ಇರಿಸಿಕೊಂಡು 'ಬೇಟೆ ಬೊ' ಎಂದು ಉಚ್ಚರಿಸುತ್ತ ಮೂರು ಸಲ ಕೊಚ್ಚಿ ಹಾಕುತ್ತಾನೆ. ಆಗ ಅವನ ಹಿಂಭಾಗದಿಂದ ಇಬ್ಬರು ಬಂದು 'ಇವತ್ತು ಹಿಡಿ, ನಾಳೆ ಹೊಡಿ' ಎಂದು ಬೆನ್ನಿಗೆ ಗುದ್ದು ಹಾಕುತ್ತಾರೆ" (ಹಿರಿಯಣ್ಣ ೧೯೯೯ - ೧೩೨). "ಗ್ರಾಮದೇವತೆಗೆ ಶಿಕಾರಿ ಎಡೆ ಎಂದು ಮೀಸಲಿಡುವುದು ಸಕಲೇಶಪುರ ಭಾಗದಲ್ಲಿದೆ ಇಲ್ಲಿ ಪಾಲು ಶಬ್ದಕ್ಕೆ ಸಂವಾದಿಯಾಗಿ ಎಡೆ ಎಂಬ ಶಬ್ದವೇ ಬಲಕೆಯಲ್ಲಿದೆ" (ಯು.ಎಸ್. ರಾಮಣ್ಣ ೨೦೦೦-೧೭). ಪ್ರಾಣಿ ಹೊಡೆದುರುಳಿಸಿದ ಬೇಟೆಗಾರ ಗೌರವಕ್ಕೆ ಪಾತ್ರನಾಗಿ ಅತಿ ಹೆಚ್ಚು ಮಾಂಸದ ಪಾಲನ್ನು ಪಡೆಯುತ್ತಾನೆ. ಬೇಟೆಯನ್ನು ಬಿಟ್ಟ ಬಿಲ್ಲುಗಾರ, ಬೇಟೆಗಾರರ ಕಿಡಿನುಡಿಗೆ ಕುಗ್ಗಿ ಅವಮಾನಿತನಾಗುತ್ತಾನೆ. ಬೇಟೆಯಲ್ಲಿ ಹೆಚ್ಚು ಮಾಂಸ ದೊರೆತರೆ ಅದನ್ನು ಒಣಗಿಸಿ, ಮಡಕೆಯಲ್ಲಿ ತುಂಬಿಟ್ಟುಕೊಂಡು, ಮುಂದೆ ಮಳೆಗಾಲದಲ್ಲಿ ಅಡಿಗೆಗೆ ಉಪಯೋಗಿಸುತ್ತಾರೆ. ಇದೇ ರೀತಿ ಮೀನನ್ನು ಒಣಗಿಸಿಟ್ಟುಕೊಳ್ಳುತ್ತಾರೆ. ಇದಕ್ಕೆ ಮಲೆನಾಡಿನಲ್ಲಿ, ಕರಿಮೀನು ಎಂದು ಕರೆಯುತ್ತಾರೆ.

(೩)

**ಆಚರಣೆ**

ಪ್ರಾಚೀನ ಕಾಲದಲ್ಲಿದ್ದ ವನಸಂಪತ್ತು ಈಗಿನ ದಿನಗಳಲ್ಲಿ ಅಂತಾರಾಷ್ಟ್ರೀಯ ವ್ಯವಹಾರಗಳ ನಡುವೆ ಸಿಲುಕಿ ಸಂಕುಚಿತಗೊಳ್ಳುತ್ತಿದೆ. ಭಾರಿ ವನ್ಯಜೀವಿಗಳಾಗಲೀ, ಅವುಗಳನ್ನು ಕೊಂದು ತಮ್ಮ ಬೆಳೆಗಳನ್ನಾಗಲೀ, ಸಾಕು ಪ್ರಾಣಿಗಳನ್ನಾಗಲೀ ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆ ಇಲ್ಲ. ಗುಂಪುಗೂಡಿ ಬೇಟೆಯಾಡಿ ಸಂಪಾದಿಸುವ ಒಂದೆರಡು ಪ್ರಾಣಿಗಳು ಎಲ್ಲಾ ಬೇಟೆಗಾರರಿಗೆ ಸಾಕಾಗುವುದಿಲ್ಲ. ಹೀಗಾಗಿ ಬೇಟೆಯಿಂದ ಹಣ ಸಂಪಾದಿಸುವ ಮಾರ್ಗ ಮುಚ್ಚಿಹೋಗಿದೆ. ಇದರಿಂದ ಜನರಿಗೆ ಬೇಟೆಗೆ ಹೋಗಬೇಕೆಂಬ ಉತ್ಸಾಹವಿಲ್ಲ, ಹಂಬಲವಿಲ್ಲ, ಆದ್ದರಿಂದ ಬೇಟೆಯಲ್ಲಿ ಆಸಕ್ತಿ ಇರುವ ಬೇಟೆಗಾರರು ಮಾತ್ರ ಬೇಟೆಗೆ ಹೋಗುತ್ತಾರೆ. ತಲೆಮಾರಿನಿಂದ ಬಂದ ಬೇಟೆಯ ಹವ್ಯಾಸವನ್ನು ಅವರು ಕೇವಲ ಮನರಂಜನೆಯಾಗಿ ನೋಡದೆ, ಹೊಣೆಗಾರಿಕೆಯ ಒಂದು ವ್ಯಕ್ತಿಯನ್ನಾಗಿ ಒಪ್ಪಿಕೊಂಡು ಆಚರಿಸುತ್ತಿದ್ದಾರೆ.

ಅಂದು ಬೇಟೆ ಮಾನವನ ಪ್ರಮುಖ ಆಹಾರೋತ್ಪಾದನ ಸಾಧನವಾಗಿದ್ದು, ಚಳಿಯಿಂದ ಬೆಚ್ಚಗಿರಲು ಚರ್ಮವನ್ನು, ಎಲುಬು ಮತ್ತು ಕೊಂಬುಗಳಿಂದ ಉಪಕರಣ ಮುಂತಾದವುಗಳನ್ನು ಸಂಗ್ರಹಿಸುವ ವಿವಿಧೋದ್ದೇಶದಿಂದ ಕೂಡಿತ್ತು. ಇದನ್ನು ಬೇಟೆ ಕೇವಲ ಸಂಸ್ಕೃತಿಯಲ್ಲಿ ಒಂದು ನೆನಪಾಗಿ ಆಚರಣೆಯಾಗಿ ಪರಿವರ್ತನೆ ಹೊಂದಿದೆ.

ಜನಸಮೂಹದ ನಡುವೆಯೇ ಹುಟ್ಟಿಕೊಂಡ ರಾಜ್ಯ ವ್ಯವಸ್ಥೆ ಹಾಗೂ ಈಗಿನ ಪ್ರಜಾರಾಜ್ಯ ವ್ಯವಸ್ಥೆಗಳು ತಮ್ಮದೇ ರೀತಿಯಲ್ಲಿ ಹಿಂಸೆಯನ್ನು ಒಳಗು ಮಾಡಿಕೊಂಡು ಜನರಿಗೆ ಹಿಂಸೆ ಕೊಡುತ್ತಿರುವ ಸಂದರ್ಭಗಳು ಬಹಳಷ್ಟು ನಡೆದಿವೆ. ಆಹಾರೋತ್ಪಾದನ ವಿಧಾನಗಳಲ್ಲಿ ಒಂದಾದ ಬೇಟೆಯು ಆಚರಣೆ ಹಂತವನ್ನು ತಲುಪಿದಾಗ, ಬೇಟೆಯೊಳಗಿನ ಹಿಂಸೆಯ ಕಲ್ಪನೆಯು ಸಾಮಾಜಿಕ - ರಾಜಕೀಯ ವ್ಯವಸ್ಥೆಯ ಹಿಂಸಿಸುವ ತೆಕ್ಕೆಗೆ ಸೇರಿದ್ದು ಆಶ್ಚರ್ಯಕರ ಸಂಗತಿ. ಮನುಷ್ಯ ಮನುಷ್ಯನನ್ನೇ ಹಿಂಸಿಸುವ, ಬೇಟೆಯಾಡುವ ವಾತಾವರಣ, ನಿರ್ಮಾಣವಾಗಿದೆ. ಈ ನಡುವೆ ಪ್ರಾಣಿದಯೆಯ ಪ್ರಚಾರ ಪ್ರಬಲವಾಗಿದೆ. ಧರ್ಮದ ಅಭಯ ಹಸ್ತದ ಅಡಿಯಲ್ಲಿ ಪ್ರಾಣಿ ರಕ್ಷಣೆ ಹಸಿರಾಗಿ ಉಸಿರಾಡುತ್ತಿದೆ. ಒಂದು ಕಡೆ ಹಾಲು ಕೊಡುವ ಹಸುವಿನಂತೆ ಪ್ರಾಣಿಗೆ ದೈವದ ಸ್ಥಾನ ಲಭ್ಯವಾಗಿದೆ. ಇನ್ನೊಂದು ಕಡೆ ಸದಾ ಕೊಳಕನ್ನು ತಿಂದು ಬದುಕುವ ಹಂದಿಯೂ ಒಂದು ನಿರ್ದಿಷ್ಟ ದಿನದಲ್ಲಿ ಲಕ್ಷ್ಮಿಯಾಗಿ ಪೂಜೆ ಗೊಳ್ಳುತ್ತದೆ. ವಿಪರ್ಯಾಸವೆಂದರೆ ಅದು ಹಿಂಸೆಯಿಂದಲೇ, ಪೂಜಿಸುವವರಿಂದ ಪ್ರಾಣ ಕಳೆದುಕೊಳ್ಳುತ್ತದೆ.

ಉತ್ತರ ಕರ್ನಾಟಕದ ಭಾಗಗಳಲ್ಲಿ ಹಲವು ಜನವರ್ಗ ಹಂದಿಯನ್ನು ತಿನ್ನುವುದಿಲ್ಲ, ಆದರೆ ಬೇಟೆಯಾಡುತ್ತಾರೆ. ಪೂಜಿಸುವ ಜನವೂ ಸೇರಿದಂತೆ ಹಂದಿಯನ್ನು ವಾಸ್ತವ ಬದುಕಿನಲ್ಲಿ ಅನಿಷ್ಟವಾಗಿ ಕಾಣುತ್ತಾರೆ. ಇದಕ್ಕೆ ಅದು ತಿನ್ನುವ ಆಹಾರವೇ ಕಾರಣವಿರಬಹುದು. ಚಲಿಸುವ ವಾಹನಗಳಿಗೆ ಹಂದಿಯು ತಾಗಿದರೆ, ಆ ವಾಹನ ಮತ್ತು ಅದರ ಯಜಮಾನನಿಗೆ ತೊಂದರೆಯಾಗುವುದೆಂದು ನಂಬುತ್ತಾರೆ. ಈಗಲೂ ಅದರ ದಟ್ಟ ಛಾಯೆ ಜನರಲ್ಲಿದೆ. ದಕ್ಷಿಣ ಕರ್ನಾಟಕದ ಹಲವು ಭಾಗದ ಜನರು ಹಂದಿಯನ್ನು ಬೇಟೆಯಾಡಿ ಮಾಂಸವನ್ನು ತಿನ್ನುತ್ತಾರೆ. ಇಲ್ಲಿನ ಜನರು ಕಾಡಿನ ಹಂದಿಗಿಂತ ಊರಿನ ಹಂದಿಯನ್ನೇ ಅನಿಷ್ಟದ ಸಂಕೇತವಾಗಿ ಕಾಣುತ್ತಾರೆ. ಹಂದಿ ಮಾಂಸದ ಅಡುಗೆ ವಾಸಿಸುವ ಮನೆಯ ಹೊರಭಾವಣಿಯಲ್ಲಿ ನಡೆಯುತ್ತದೆ. ಅದರ ಊಟವೂ ಅಲ್ಲಿಯೇ ನಡೆಯುತ್ತದೆ. ಊಟ ಮಾಡಿದ ಪ್ರತಿಯೊಬ್ಬರೂ ಸಗಣಿಯಿಂದ ಕೈ ತೊಳೆದುಕೊಳ್ಳಬೇಕೆಂಬ ನಿಯಮವಿದೆ. ನಂತರ ಊಟ ಮಾಡಿದ ಸ್ಥಳವನ್ನು ಸಗಣಿಯಿಂದ ಸಾರಿಸುತ್ತಾರೆ. ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲಿಯೂ ಮಾಂಸವನ್ನು ಬೇಯಿಸುವ ಒಲೆಗಳಿರುತ್ತವೆ. ಈ ಒಲೆಗಳಿಗೆ ಹೊಲಸಿನ ಒಲೆಗಳೆಂದು ಕರೆಯುತ್ತಾರೆ. ಇವುಗಳನ್ನು ಮಲೆನಾಡಿನ ಹಲವು ಕಡೆ ಕಾಣಬಹುದು. ಹಂದಿ ಮಾಂಸವನ್ನುಳಿದು ಇತರ ಪ್ರಾಣಿಗಳ ಮಾಂಸದ ಅಡುಗೆಯನ್ನು ಈ ಒಲೆಯಲ್ಲಿ ಮಾಡುತ್ತಾರೆ.

ಈ ಒಲೆಯಲ್ಲಿ ಹಂದಿ ಮಾಂಸದ ಅಡುಗೆ ಮಾಡುವಂತಿಲ್ಲ. ಈ ನಿಷೇಧವನ್ನು ಮೀರಿದರೆ ಆ ಮನೆಯಲ್ಲಿ ಹಾವು ಕಾಣಿಸಿಕೊಳ್ಳುವುದು, ಹಾಲು ಕೊಡುವ ಹಸುವಿನ ಕೆಚ್ಚಲಲ್ಲಿ ರಕ್ತ ಸುರಿಯುವುದು, ಹಾಲು, ಮಜ್ಜಿಗೆ ಕೆಟ್ಟು ಹೋಗುವುದು ಹೀಗೆ ನಾನಾ ರೀತಿಯ ತೊಂದರೆಗಳಾಗುತ್ತದೆಂದು ನಂಬಿಕೆ ಇದೆ. ಈ ನಿಷೇಧವನ್ನು ಜನ ಪಾಲಿಸಿದಂತೆ ಕಾಣುತ್ತಿಲ್ಲ. ಮನೆಯಲ್ಲಿ ಒಂದೇ ಒಲೆ ಇದ್ದು, ಅದರಲ್ಲಿ ಹಂದಿ ಮಾಂಸವನ್ನು ಸೇರಿದಂತೆ ಎಲ್ಲಾ ಅಡುಗೆಗಳನ್ನು ಮಾಡುತ್ತಾರೆ. ಇದರಿಂದ ಯಾವ ತೊಂದರೆಯೂ ಜೀವಕ್ಕೆ ಆದಂತಿಲ್ಲ.

ಯುಗಾದಿ ಹಬ್ಬದಂದು ಹಾಗೂ ಮರುದಿನ ಬೇಟೆಗೆ ಹೋಗುವ ಆಚರಣೆ ಉತ್ತರ ಕರ್ನಾಟಕದಾದ್ಯಂತ ಕಂಡುಬರುತ್ತದೆ. ಮೊದಲು ಮಾಡುವ ಬೇಟೆಗೆ ಮುಚ್ಚುಬೇಟೆ ಎಂದು ಕರೆಯುತ್ತಾರೆ. ಬೇಟೆಯಾದ ಪ್ರಾಣಿಗಳನ್ನು ಯಾರಿಗೂ ತಿಳಿಸದೇ ಊರ ಹೊರಗೆ ಮುಚ್ಚಿಡುವುದೇ ಈ ಬೇಟೆಯ ವಿಶೇಷವಾಗಿದೆ.

ಮುಚ್ಚು ಬೇಟೆಯ ಮರುದಿನ ನಡೆಸುವ ಬೇಟೆಗೆ ಎಲ್ಲರೂ ಭಾಗವಹಿಸುವಂತೆ ತಳವಾರ ಸಾರುತ್ತಾನೆ. ತಳವಾರ ಸಾರುವಾಗ ಹರಿಜನ ಹಲಗೆ ಬಡಿಯುತ್ತಾನೆ. ಅಂದಿನ ಬೆಳ್ಳಿಗೆ ೫ ಗಂಟೆಗೆ ಬುಡೇಕಲ್ಲು (ಬಲೀಶ್ವರ) ಎದುರು ಜೀವಂತ ಹಂದಿಯನ್ನು ಕಂದಕ ಕಡಿದು ಅದರಲ್ಲಿ ಮಣ್ಣು ಮಾಡುತ್ತಾರೆ. ಮಣ್ಣಿನ ರಾಶಿ ಮೇಲೆ ಹೂವು ಭಂಡಾರ ಇತ್ಯಾದಿ ಹಾಕಿ ಪೂಜಿಸುತ್ತಾರೆ. ಹಂದಿಯನ್ನು 'ಮಿಕ' ವೆಂದು ಕರೆಯುತ್ತಾರೆ. ಅದು ಅವರ ಪಾಲಿಗೆ ಲಕ್ಷ್ಮಿ. ಲಕ್ಷ್ಮಿಯನ್ನು ಜೀವಂತ ಮಣ್ಣು ಮಾಡಿದ ಸ್ಥಳದಲ್ಲಿ ಗುರಿಕಾರನು ಕರಿ ಕುಂಬಳ ಕಾಯಿ ಹಾಗೂ

ತೆಂಗಿನ ಕಾಯಿ ಇಟ್ಟು ಪೂಜಿಸುತ್ತಾನೆ. ಅಂದು ಮಧ್ಯಾಹ್ನ ಒಂದು ಗಂಟೆಗೆ ಮನೆಯಿಂದ ಬೇಟೆಯ ಸಾಧನಗಳನ್ನು ಹಿಡಿದು ಬಲೀಶ್ವರನ ಕಟ್ಟೆಗೆ ಬರುತ್ತಾರೆ. ಅಲ್ಲಿ ಪೂಜೆ ಸಲ್ಲಿಸಿ ಎಲ್ಲರೂ ಕಾಡಿನ ಕಡೆಗೆ ಹೊರಡುತ್ತಾರೆ. ಕಾಡಿನಲ್ಲಿ ಬೇಟೆಯಾಡಿದ ಪ್ರಾಣಿಯನ್ನು ಹೊತ್ತು ತರುತ್ತಾರೆ. ಬೇಟೆಯನ್ನು ಹೊಡೆದುರುಳಿಸಿದ ವ್ಯಕ್ತಿ ಹಾಗೂ ಬೇಟೆ ಎರಡನ್ನು ಆ ಸಂಜೆ ಬೀದಿ ಬೀದಿಯಲ್ಲಿ ಮೆರವಣಿಗೆ ಮಾಡುತ್ತಾರೆ. ಕೊಡಗಿನ ಕಡೆ ಹುಲಿ ಹೊಡೆದ ಬೇಟೆಗಾರನನ್ನು ಗೌರವಿಸುವ ಪದ್ಧತಿಯೊಂದು ನಡೆಯುತ್ತದೆ. ಬೇಟೆಗಾರ ಹಾಗೂ ಸತ್ತ ಹುಲಿ ಸಿಂಗಾರ ಮಾಡಿ ಮದುವೆ ಮಾಡಿಸಲಾಗುತ್ತದೆ. ಇದಕ್ಕೆ ನರಿಮಂಗಲ ಎನ್ನುತ್ತಾರೆ. ಇದೇ ರೀತಿ ನವರಾತ್ರಿ ಹಾಗೂ ದೀಪಾವಳಿಗಳಲ್ಲಿ ಬೇಟೆಯಾಡುವುದು ಕರ್ನಾಟಕದ ಬೇರೆ ಬೇರೆ ಕಡೆ ಕಂಡು ಬರುತ್ತದೆ.

ಹಬ್ಬ, ಜಾತ್ರೆ, ಹುಣ್ಣಿಮೆ ಇತ್ಯಾದಿ ದಿನಗಳಲ್ಲಿ ಬೇಟೆಗೆ ಹೋಗುವಂತೆ, ಸಾವಿನ ಸಂದರ್ಭದಲ್ಲಿಯೂ ಬೇಟೆಗೆ ಹೋಗುವುದು ಕರ್ನಾಟಕದ ಹಲವಾರು ಕಡೆ ಕಂಡುಬರುತ್ತದೆ. ಮಲೆನಾಡಿನ ಕೆಲವು ಜನವರ್ಗಗಳಲ್ಲಿ ಸತ್ತವನ ತಿಥಿ, ವೈಕುಂಠ ಸಮಾರಾಧನೆಗಳಲ್ಲಿ ಮಾಂಸದ ಅಡುಗೆಯನ್ನು ಎಡೆ ಇಡುತ್ತಾರೆ. ಎಡೆಗೆ ಬೇಕಾದ ಮಾಂಸವನ್ನು ಮಾರುಕಟ್ಟೆಯಿಂದ ಕೊಂಡು ಅಥವಾ ಶಿಕಾರಿಯಿಂದ ಸಂಗ್ರಹಿಸಿ ತರುತ್ತಾರೆ. ಎಡೆಗೆ ಮಾಂಸ, ಕಡಬು, ಅನ್ನ, ಸಾರು ಹಾಗೂ ಸತ್ತ ವ್ಯಕ್ತಿ ಅಸೆ ಪಡುವ ಇತರೆ ತಿಂಡಿ ತಿನಿಸುಗಳನ್ನು ಇಟ್ಟು ಪೂಜೆ ಸಲ್ಲಿಸುತ್ತಾರೆ. "ಊಟಕ್ಕೆ ಕಡಬು, ಮಾಂಸ, ಶಿಕಾರಿ ಮಾಡಿದ್ದರೆ ಕಾಡು ಪ್ರಾಣಿ ಮಾಂಸ, ಅನ್ನ, ಸಾರು, ಮಜ್ಜಿಗೆ, ಬಾರಿ ಊಟ. ಆಗ ಸತ್ತ ತಿಥಿಗಳಿಗೆ ಸಿಹಿ ಅಡಿಗೆ ಮಾಡುತ್ತಿರಲಿಲ್ಲ" (ಕೆ.ಎಸ್. ರಾಮಪ್ಪಗೌಡ ೧೯೯೮ - ೧೫೮). ಮಣೆಯ ಮೆಲಿರುವ ಕಳಸದ ಹತ್ತಿರವಿರುವ ಎರಡು ಹಣತೆಗಳನ್ನು ಒಂದಕ್ಕೊಂದು ಸೇರಿಸುತ್ತಾರೆ. ಆಗ ಸತ್ತವನು ಪಿತೃಗಳ ಜೊತೆಗೆ ಸೇರಿದನೆಂದು ತಿಳಿಯುತ್ತಾರೆ. ಈ ಸಮಾರಾಧನೆಗೆ ಸತ್ತವರ ಹತ್ತಿರದ ಬಂಧುಗಳು ಹಾಗೂ ಪರಿಚಿತ ವ್ಯಕ್ತಿಗಳು ಭಾಗವಹಿಸುತ್ತಾರೆ. ಸತ್ತ ವ್ಯಕ್ತಿಯ ನಾಮಬಲಕ್ಕೆ ಬೇಟೆ ವಶಪಡಿಸಿಕೊಳ್ಳುವ ಶಕ್ತಿ ಇದ್ದರೆ ಬೇಟೆಯಾಗುವುದೆಂದು, ಇಲ್ಲದಿದ್ದರೆ ಇಲ್ಲವೆಂದು ನಂಬುತ್ತಾರೆ. ಹೀಗೆ ಬೇಟೆಯು ಆ ಸಂಸ್ಕೃತಿಯವರಲ್ಲಿ ಬೆಸೆದುಕೊಂಡಿರುತ್ತದೆ. ಸಮಾರಾಧನೆಯ ಹಿಂದಿನ ದಿನದ ಬೆಳಗ್ಗೆ ಅಥವಾ ಅದರ ಹಿಂದಿನ ರಾತ್ರಿ ಬೇಟೆಗಾರನೊಬ್ಬ ಊರಿನ ಬೇಟೆಗಾರರಿಗೆಲ್ಲ ಬೇಟೆಯ ಕರೆಯನ್ನು ನೀಡುತ್ತಾನೆ. ಆ ದಿನದ ಬೇಟೆಯ ಸ್ಪಷ್ಟ ಉದ್ದೇಶವನ್ನು ಬೇಟೆಗಾರರಿಗೆ ತಿಳಿಸುತ್ತಾನೆ. ಸತ್ತ ವ್ಯಕ್ತಿಯ ನಾಮಬಲದ ಮೇಲೆ ಬೇಟೆಗೆ ಹೊರಡುತ್ತಾರೆ. ಆ ದಿನವೆಲ್ಲಾ ಕಾಡನ್ನು ಬೇಟೆಗೆ ಕಟ್ಟಿ ಬೇಟೆಯಾಡುತ್ತಾರೆ. ಅಂದಿನ ಬೇಟೆಯಲ್ಲಿ ದೊರೆತ ಪ್ರಾಣಿಯನ್ನು ಸತ್ತ ವ್ಯಕ್ತಿಯ ಮನೆಯವರಿಗೆ ಕೊಡುತ್ತಾರೆ.

ದಕ್ಷಿಣ ಕರ್ನಾಟಕದ ಕೆಲವು ಭಾಗಗಳ ಜನವರ್ಗಗಳಲ್ಲಿ ಧನುರ್ಮಾಸದಲ್ಲಿ ಬೇಟೆಗೆ ಹೋಗುವ ಆಚರಣೆ ಇಂದಿಗೂ ಕಂಡುಬರುತ್ತದೆ. ಹಳೆಯ ವರ್ಷದ ಕೊನೆ ಹಾಗೂ ಹೊಸ ವರ್ಷದ ಮೊದಲು ಅಂದರೆ ಡಿಸೆಂಬರ್ ೧೫ರಿಂದ ಜನವರಿ ೧೫ರ ವೇಳೆಗೆ. ಅದರಲ್ಲೂ ಗುರುವಾರಗಳಲ್ಲಿ ಮಾತ್ರ ಸಾಮೂಹಿಕ ಬೇಟೆ ನಡೆಯುತ್ತದೆ. ಬೇಟೆಗೆ ಹೋಗುವ ದಿನವನ್ನು ಊರ ಹಿರಿಯರೊಡನೆ ಚರ್ಚಿಸಿ ತೀರ್ಮಾನಿಸಿಕೊಳ್ಳುತ್ತಾರೆ. ಹಿರಿಯರ ಮಾರ್ಗದರ್ಶನದಂತೆ ಬೇಟೆಯ ಹಿಂದಿನ ರಾತ್ರಿ ಊರ ಮುಂದಿನ ಗುಡಿಯ ಎದುರು ಸ್ವಲ್ಪ ಹೊತ್ತು ಊರಿನ ತಲವಾರ ತಮಟೆ ಬಡಿಯುತ್ತಾನೆ. ಹಾಗೆಯೇ ಬೇಟೆಗೆ ಹೋಗುವ ಬೆಳಿಗ್ಗೆ ಎಲ್ಲರೂ ಬೇಟೆಗೆ ಬರಬೇಕೆಂದು ತಮಟೆ ಬಡಿದು ಸಾರುತ್ತಾನೆ. ಬೇಟೆಗಾರರೆಲ್ಲ ಬೇಟೆಯ ಆಯುಧಗಳಿಂದ ಸಿದ್ಧರಾಗಿ ಗುಡಿಯ ಎದುರು ಸೇರುತ್ತಾರೆ. ಗುಡಿಯ ಎದುರು ಗುಂಪಾಗಿ ನಿಂತು ಆಯುಧಗಳನ್ನು ಎತ್ತಿ ಎಲ್ಲರೂ ತಮ್ಮ ಇಷ್ಟ ದೇವರುಗಳನ್ನು ಹೇಳಿಕೊಂಡು ಒಕ್ಕೊರಲಿನಿಂದ ಕೂಗು ಹಾಕುತ್ತಾರೆ. ಕೊಡಗಿನ ಕಡೆ ಬೇಟೆಗೆ ಹೋಗುವ ಮುನ್ನ ಎಲ್ಲರೂ ತಮ್ಮ ಇಷ್ಟ ದೈವವನ್ನು ಪ್ರಾರ್ಥಿಸಿಕೊಳ್ಳುವ ಪದ್ಧತಿ ಇದೆ. ನಂತರ ಗುಡಿಯ ಪೂಜಾರಿಯಿಂದ ಮಂಗಳಾರತಿ ಮತ್ತು ತೀರ್ಥವನ್ನು ಪಡೆಯುತ್ತಾರೆ. ತಂಡದ ನಾಯಕನಿಗೆ ಪೂಜಾರಿಯು ದೇವರ ಕೊರಳ ಹೂವಿನ ಹಾರವೊಂದನ್ನು ಹಾಕುತ್ತಾನೆ.

ಗುಡಿಯಿಂದ ಬೇಟೆಗಾರರ ತಂಡವು ವಾದ್ಯಗಾರರ ಸಮೇತ ಬೇಟೆನಾಯಿಗಳ ಜೊತೆಗೆ ಮುಖಂಡನ ಮುಂದಾಳುತನದಲ್ಲಿ ಊರಿನ ಪೂರ್ವ ದಿಕ್ಕಿನ ಹೆಬ್ಬಾಗಿಲಿನಿಂದ ಕಾಡಿನ ಕಡೆಗೆ ನಡೆಯುತ್ತಾರೆ. ಈ ಮೆರವಣಿಗೆಯಲ್ಲಿ ಭಾಗವಹಿಸುವ ಎಲ್ಲಾ ಬೇಟೆಗಾರರು ಬೇಟೆಯ ಹೊಸ ಉಡುಗೆ ತೊಡುಗೆಗಳನ್ನು ತೊಟ್ಟಿರುತ್ತಾರೆ. ಕೆಲ ಬೇಟೆಗಾರರು ಬಲೆ ಹಾಕಿ ಪ್ರಾಣಿಗಳನ್ನು ಹಿಡಿದರೆ ಮತ್ತೆ ಕೆಲವರು ಬಡಿಗೆಯಿಂದ ಹೊಡೆದು ಕೊಲ್ಲುತ್ತಾರೆ. ಬೇಟೆಯಲ್ಲಿ ದೊರೆತ ಪ್ರಾಣಿಗಳನ್ನು ಹೊತ್ತು ನಾಲ್ಕು ದಿಕ್ಕುಗಳಿಗೂ ಕೇಳಿಸುವಂತೆ ಕೇಕೆ ಹಾಕುತ್ತಾ ಊರ ಕಡೆಗೆ

ಬರುತ್ತಾರೆ. ಬೆಳಿಗ್ಗೆ ಹೊರಟ ಪೂರ್ವದಿಕ್ಕಿನ ಹೆಬ್ಬಾಗಿಲಿನ ಮೂಲಕವೇ ಊರನ್ನು ಪ್ರವೇಶಿಸುತ್ತಾರೆ. ಗುಡಿಯ ಮುಂದೆ ಎಲ್ಲರೂ ಕೇಕೆ ಹಾಕಿ ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ.

ಈ ರೀತಿಯ ಸಾಂಪ್ರದಾಯಿಕ ಬೇಟೆಯಲ್ಲಿ ಹೊಗೆಬೇಟೆ, ಕೋಲು ಬೇಟೆ, ದೊಡ್ಡ ಬೇಟೆ ಎಂಬ ಮೂರು ವಿಧಗಳಿವೆ. ಅವು ಮೂರು ವಾರಗಳಲ್ಲಿ ನಡೆಯುತ್ತವೆ. ಮೊದಲ ಎರಡೂ ಬೇಟೆಯ ಆಚರಣೆಗಳು ಚಿಕ್ಕವಾಗಿರುತ್ತವೆ. ಮೂರನೆಯದು ಅತಿ ದೊಡ್ಡದು ಹಾಗೂ ಹೆಚ್ಚು ಜನರು ಭಾಗವಹಿಸುವ ಆಚರಣೆಯಾಗಿದೆ. ಹೊಗೆ ಬೇಟೆಯಲ್ಲಿ ಮಾಂತ್ರಿಕಾ ಚರಣೆಯ ವಿಧಿ ವಿಧಾನಗಳು ಹೆಚ್ಚಾಗಿ ಕಂಡುಬರುತ್ತವೆ. ಬೇಟೆಗಾರರು ಊರಿನ ಪೂರ್ವ ಬಾಗಿಲಿನಿಂದ ಹೊರಟು ಕಾಡಿನ ಬಯಲು ಪ್ರದೇಶದಲ್ಲಿ ಹುತ್ತ ಒಂದರ ಮೇಲೆ ತಮ್ಮ ಆಯುಧಗಳನ್ನೆಲ್ಲಾ ಓರಣವಾಗಿಡುತ್ತಾರೆ. ಒಂದು ಜಾತಿಯ ಕಾಡಿನ ಹುಲ್ಲು ಹಾಗೂ ಮೊಲದ ಪಿಚಿಕೆಗಳಿಗೆ ಬೆಂಕಿ ಅದರ ಹೊಗೆಯಿಂದ ಆಯುಧಗಳಿಗೆ ಧೂಪ ಹಾಕುತ್ತಾರೆ. ನಂತರ ಬೇಟೆಯಾಡುತ್ತಾರೆ. ಇದರಲ್ಲಿ ಮುಖ್ಯವಾಗಿ ಆಯುಧಗಳಿಗೆ ಮಾಂತ್ರಿಕ ಶಕ್ತಿಯನ್ನು ತುಂಬುವಂಥದ್ದು ಕಂಡುಬರುತ್ತದೆ. ಕೋಲುಬೇಟೆಯು ಎರಡನೆಯ ಆಚರಣೆಯಾಗಿದ್ದು ಆ ಸಂದರ್ಭದಲ್ಲಿ ಊರಿನಿಂದ ಕಾಡಿಗೆ ಹೋಗುವ ದಾರಿಯಲ್ಲಿ ಸಿಗುವ ಗುಡಿಗಳಿಗೆ ಪೂಜಿಸಿ ನಂತರ ಬೇಟೆಯನ್ನು ದಕ್ಕಿಸಿಕೊಳ್ಳುವಂಥದ್ದು. ಬೇಟೆಯಿಂದ ದೊರೆತ ಪ್ರಾಣಿಗಳನ್ನು ಮೆರವಣಿಗೆಯ ಮೂಲಕ ಹೊತ್ತು ಊರಿನ ಪೂರ್ವ ದಿಕ್ಕಿನ ಹೆಬ್ಬಾಗಿಲಿನಿಂದ ಊರನ್ನು ಪ್ರವೇಶಿಸುತ್ತಾರೆ. ಗುಡಿಯ ಮುಂದೆ ಎಲ್ಲರೂ ಸೇರಿ ಕೇಕೆ ಹಾಕಿ ನಂತರ ಅವರವರ ಮನೆಯನ್ನು ಸೇರುತ್ತಾರೆ.

ಮೂರನೆಯ ಆಚರಣೆಯಾದ ದೊಡ್ಡ ಬೇಟೆಯು ಹಲವಾರು ಬೇಟೆಗಾರರನ್ನು, ಬೇಟೆನಾಯಿಗಳನ್ನು, ವಾದ್ಯಗಾರರನ್ನು, ಸೋವುಗಾರರನ್ನು, ಬಿಲ್ಲುಗಾರರನ್ನು ಒಳಗೊಂಡಿರುತ್ತದೆ. ದೊಡ್ಡ ಪ್ರಮಾಣದ ಇದು ಹೆಸರಿಗೆ ತಕ್ಕಂತೆ ಹೆಚ್ಚು ಜನಾಕರ್ಷಣೀಯವಾಗಿದ್ದು, ಇದರಲ್ಲಿ ಅನೇಕ ಊರಿನ ಬೇಟೆಗಾರರ ತಂಡಗಳು ಭಾಗವಹಿಸಿರುತ್ತವೆ. ಬೇಟೆಗೆ ಹೊರಡುವ ದಿನ ಹಿಚುಕಿದ ಅವರೇ ಬೇಳೆಯ ವಿಶೇಷ ಸಾರಿನ ಅಡಿಗೆ ಮಾಡಿ, ಊಟ ಮಾಡಿಕೊಂಡು ಹೊರಡುತ್ತಾರೆ. ಅಂದಿನ ದಿನ ಎತ್ತೋ ದೇವರನ್ನು (ಬೇಟೆರಂಗ) ಇಟ್ಟು ಪೂಜಿಸುತ್ತಾರೆ. ರಾಮನು ಬೇಟೆಯ ಆರಾಧ್ಯ ದೈವವೆಂದು ಅವರು ನಂಬುತ್ತಾರೆ. ಬೇರೆ ಬೇರೆ ಊರುಗಳಿಂದ ಹೊರಟ ಬೇಟೆಗಾರರು ಇಡೀ ದಿನವೆಲ್ಲವೂ ಗುಂಪು ಗುಂಪಾಗಿಯೇ ಬೇಟೆಯಾಡುತ್ತಾರೆ. ಅವರೆಲ್ಲರು ಒಂದು ನಿರ್ದಿಷ್ಟ ಗುಡಿಯ ಮುಂದೆ ಬಂದು ಸೇರುತ್ತಾರೆ. ಪ್ರತಿ ತಂಡದಲ್ಲೂ ವಾದ್ಯಗಾರರು ವಾದ್ಯ ನುಡಿಸುತ್ತಿರುತ್ತಾರೆ. ಗುಡಿಯ ಪೂಜಾರಿಯು ಪ್ರತಿ ತಂಡದ ಮುಖ್ಯಸ್ಥರಿಗೂ ಹೂವಿನ ಹಾರ ಹಾಕಿ ಗೌರವಿಸುತ್ತಾನೆ. ಆ ತಕ್ಷಣ ಆ ತಂಡದವರು ಅಂದು ಬೇಟೆಯಾಡಿದ ಪ್ರಾಣಿಗಳನ್ನು ಮೇಲಕ್ಕೆತ್ತಿ ಪ್ರದರ್ಶಿಸುತ್ತಾ ತಮ್ಮ ವಾದ್ಯಗಾರರೊಂದಿಗೆ ಕೋಲಾಹಲದಿಂದ ಕೇಕೆ ಹಾಕುತ್ತಾ ಗುಡಿಯನ್ನು ಸುತ್ತಿ ತೀರ್ಥ ಹಾಕಿಸಿಕೊಂಡು ತಮ್ಮೂರಿಗೆ ತೆರಳುತ್ತಾರೆ. ಹೀಗೆ ಪ್ರತಿ ತಂಡದವರು ಕೂಡ ಮಾಡುತ್ತಾರೆ.

ಬೇಟೆಗೆ ಉಪಯೋಗಿಸುವ ರಾಮಡೋಲು, ತಮಟೆ, ಬರ್ಜಿ, ಚಂದ್ರಾಯುಧ, ಗಂಡುಗೊಡಲಿ, ಬಲೆ ಇತ್ಯಾದಿಗಳು ಸಾಂಪ್ರದಾಯಿಕ ಆಯುಧಗಳಾಗಿವೆ. ಹೊರನೋಟಕ್ಕೆ ಇವು ಸರಳವಾಗಿ ಕಂಡರೂ ಬಳಕೆಯಲ್ಲಿ ಬಲಶಾಲಿ ಹಾಗೂ ಹೆಚ್ಚು ಪ್ರಯೋಜನಕಾರಿಯಾಗಿವೆ. ಇಲ್ಲಿ ಬಳಸುವ ವಾದ್ಯಗಳು ಒಂದು ಹಬ್ಬದ ವಾತಾವರಣವನ್ನು ಉಂಟು ಮಾಡುತ್ತವೆ. ತಮಟೆಯ ಜೊತೆಗೆ ದೊಡ್ಡ ಗಾತ್ರದ ರಾಮಡೋಲು, ಪಾಚೆ, ಮ್ಯಾಳ, ಹಾಗೂ ಕೊಂಬುಗಳು ಗಿಡಗಂಟೆಯಲ್ಲಿ ಅಡಗಿರುವ ಪ್ರಾಣಿಗಳನ್ನು ಎಬ್ಬಿಸಲು ಅನುಕೂಲಕರವಾಗಿವೆ. ಇಂಥ ಉಲ್ಲೇಖಗಳು ಪ್ರಾಚೀನ ಕಾವ್ಯಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಮಲೆನಾಡಿನಲ್ಲಿ ಈ ಕೆಲಸಕ್ಕಾಗಿಯೇ ಕೆಲವರನ್ನು ನಿಯೋಜಿಸಿರುವುದು ಕಂಡುಬರುತ್ತದೆ. ಮೊಲದ ಪಿಚಿಕೆಗೆ ಹೊಗೆ ಹಾಕಿ ಆಯುಧಗಳಿಗೆ ಧೂಪ ಹಾಕುವ ಪ್ರಕ್ರಿಯೆಯಲ್ಲಿ ಸಮೃದ್ಧ ಬೇಟೆಯ ಆಶಯದಿಂದ ಆದಿಮಾನವ ನಡೆಸುತ್ತಿದ್ದ ಮಾಟಕ್ಕೆ ಸಂಬಂಧಿಸಿದ ನಂಬಿಕೆಯ ಪಳೆಯುಳಿಕೆ ಅಂತರ್ಗತವಾಗಿರುವಂತೆ ಕಂಡುಬರುತ್ತದೆ. ಈಗಲೂ ದುಷ್ಟ ಮಾಟದಲ್ಲಿ ವ್ಯಕ್ತಿಯೊಬ್ಬನಿಗೆ ಸಂಬಂಧಿಸಿದ ಯಾವುದಾದರೂ ವಸ್ತುವನ್ನು ಬಳಸಿ ಮಾಟ ಮಾಡಿದರೆ ಆ ವ್ಯಕ್ತಿಗೆ ಕೇಡಾಗುತ್ತದೆ ಅಥವಾ ಮಾಟಗಾರನ ನಿರ್ದೇಶನದಂತೆ ವರ್ತಿಸುತ್ತಾನೆ ಎಂಬ ನಂಬಿಕೆಗಳನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಒಟ್ಟಿನಲ್ಲಿ ಬೇಟೆಯ ಆಚರಣೆಯಲ್ಲಿ ಆದಿಮತೆಯ ಆಯಾಮ ಇರುವುದು ಕಂಡುಬರುತ್ತದೆ. ಬೇಟೆಯ ಮೂರು ಆಚರಣೆಯಲ್ಲಿ ತೆಂಕಣಬೇಟೆ ಎಂಬ ಇನ್ನೊಂದು ಬೇಟೆಯು ರೂಢಿಯಲ್ಲಿದೆ. ದೊಡ್ಡ ಬೇಟೆಗೆ ಮೊದಲು ಒಂದು ದಿನ ಬೇಟೆಗೆ ಹೊರಟು ದೂರದ ಇನ್ನೊಂದು ಊರಿನ ಸರಹದ್ದಿಗೆ ಹೋಗಿ ಅಲ್ಲಿ ರಾತ್ರಿ ತಂಗಿ ಪ್ರಾಣಿಗಳನ್ನು ದಕ್ಕಿಸಿಕೊಂಡು ಮತ್ತೆ ಬೇಟೆಯಾಡುತ್ತಲೇ ಊರಿಗೆ ಹಿಂದಿರುಗುವಂತಹುದು ಒಂದು

ಪದ್ಧತಿ. ಈ ಬೇಟೆಯ ಪದ್ಧತಿ ಈಗಿನ ದಿನದಲ್ಲಿ ಕಡಿಮೆಯಾಗಿದೆ. ಈ ಬೇಟೆಯ ಆಚರಣೆಗಳಲ್ಲಿ ಒಂದು ಬುಡಕಟ್ಟಿನ ಜನರು ಇನ್ನೊಂದು ಬುಡಕಟ್ಟಿನ ನೆಲೆಯನ್ನು ಆಕ್ರಮಿಸಿದ ದಿಗ್ವಿಜಯದ ಸಂಕೇತವಾಗಿಯೂ ಕಂಡುಬರುತ್ತದೆ.

ಪ್ರಾಚೀನ ಕಾಲದಲ್ಲಿ ಮಾನವನಿಗೆ ಅನಿವಾರ್ಯವಾಗಿದ್ದ ಬೇಟೆ ನಂತರದ ದಿನಗಳಲ್ಲಿ ಆತನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಯಿತು. ಐವತ್ತು ಅರವತ್ತು ವರ್ಷಗಳ ಹಿಂದೆ ಬೇಟೆಗೆ ಬಹಳ ಪ್ರಾಧ್ಯಾನತೆ ಇತ್ತು. ಬೇಟೆಗಾರನಿಗೆ ವಿಶೇಷ ಗೌರವ ಪ್ರಶಸ್ತಿಗಳು ದೊರೆಯುತ್ತಿದ್ದವು. ಅದರಲ್ಲೂ ಹುಲಿಗಳನ್ನು ಬೇಟೆಯಾಡಿದ ಬೇಟೆಗಾರನಿಗೆ 'ಹುಲಿ ಮದುವೆ' ಮಾಡಿಸಿ ಗೌರವಿಸಲಾಗುತ್ತಿತ್ತು. ಅಂದು ಅದು ಅನಿವಾರ್ಯವಾಗಿತ್ತು. ಇಂದಿನ ದಿನಗಳಲ್ಲಿ ಕಾಡು ಕಡಿಮೆಯಾಗಿದೆ. ಊರು ವಿಸ್ತರಿಸಿ ಜನಸಂಖ್ಯೆ ಹೆಚ್ಚಿದೆ. ಇರುವ ಕಾಡಿನಲ್ಲಿಯೇ ಬೇಟೆಯು ಸಾಗಿದೆ. ಆದರೆ ಅದು ಸಂಸ್ಕೃತಿಯಿಂದ ಹೊರಬಂದು ವ್ಯಾಪಾರಿ ವೃತ್ತಿಯಾಗಿದೆ. ಮಾರುಕಟ್ಟೆಯ ಬೇಡಿಕೆಗನುಗುಣವಾಗಿ ಆನೆಯಿಂದ ಹಿಡಿದು ಹಾವು ಉಡಗಳವರೆಗೆ ಅವ್ಯಾಹತವಾಗಿ ಬೇಟೆ ನಡೆದು ಪ್ರಾಣಿಗಳನ್ನು ಚಿತ್ರ ಪಟದಲ್ಲಿ ನೋಡುವಂತಾಗಿದೆ. ಸಂಸ್ಕೃತಿಯಿಂದ ವಿಕೃತಿಯತ್ತ ಚಲಿಸಿದ ಬೇಟೆ ಮನುಷ್ಯ ತನ್ನನ್ನು ತಾನು ಕೊಂದುಕೊಳ್ಳುವ ಮಾರ್ಗವೇ ಸರಿ. ಇಂದಿನ ದಿನಗಳಲ್ಲಿ ಬೇಟೆ, ಬೆಳೆ ರಕ್ಷಣೆ, ಆಹಾರ, ಆತ್ಮ ರಕ್ಷಣೆ ಹಾಗೂ ವೈದ್ಯಕೀಯ ಉದ್ದೇಶಕ್ಕಾಗಿ ಅಲ್ಲಲ್ಲಿ ನಡೆಯುತ್ತಿದೆ. ಕೆಲವು ಭಾಗಗಳಲ್ಲಿ ಆಚರಣೆಯ ಹಿನ್ನಲೆಯಲ್ಲಿ ಪ್ರಾಣಿಗಳನ್ನು ಕಗ್ಗೊಲೆ ಮಾಡಲಾಗುತ್ತದೆ. ಈ ಬಗೆಗೆ ಪರಿಸರ ಪ್ರೇಮಿಗಳು, ಸರಕಾರ ಹಾಗೂ ಪ್ರಾಜ್ಞ ಜನ ಗಮನಿಸಿ ಬೇಟೆಯನ್ನು ತಡೆಯಬೇಕು. ಪರಿಸರವನ್ನು ಉಳಿಸಿಕೊಳ್ಳಬೇಕು.

ಆಚರಣೆ, ಔಷಧಿ, ನಂಬಿಕೆ, ರಕ್ಷಣೆ ಇತ್ಯಾದಿ ಕಾರಣಕ್ಕಾಗಿ ನಡೆಯುತ್ತಿರುವ ಬೇಟೆಯು ನಮ್ಮ ನಡುವೆ ಇನ್ನೂ ಜೀವಂತವಾಗಿದೆ. ಬೇಟೆ ಹೀಗೆ ಮುಂದುವರಿಯುತ್ತಾ ಹೋದರೆ ನಂತರದ ದಿನಗಳಲ್ಲಿ ಮನುಷ್ಯನ ಬದುಕು ದುಸ್ತರವಾಗುತ್ತದೆ. ಬೇಟೆಯಿಂದ ಜೈವಿಕ ಆಹಾರ ಸರಪಳಿ ತಪ್ಪಿ ಅಸಮತೋಲನವಾಗುತ್ತದೆ. ಒಂದು ಪ್ರಾಣಿ ಅಥವಾ ಪಕ್ಷಿ ಒಂದನ್ನು ತಿಂದು, ಇನ್ನೊಂದು ಬದುಕುತ್ತದೆ. ಇದು ಒಂದು ಪ್ರಕೃತಿ ನಿಯಮದಡಿ ನಿರಂತರವಾಗಿ ನಡೆಯುತ್ತಿರುತ್ತದೆ. ಆದರೆ ಮನುಷ್ಯ ಪ್ರಕೃತಿ ನಿಯಮದ ವಿರುದ್ಧ ಬೇಟೆಯಾಡುತ್ತಾನೆ. ಯಾವ ಪ್ರಾಣಿ, ಪಕ್ಷಿ ಇತ್ಯಾದಿಗಳು ಹೆಚ್ಚು ಲಾಭ ತರುತ್ತವೆಯೋ ಅವುಗಳನ್ನು ಅವ್ಯಾಹತವಾಗಿ ಕೊಲ್ಲುತ್ತಿರುತ್ತಾನೆ. ಹೀಗಾಗುವುದರಿಂದ ಜೈವಿಕ ಆಹಾರ ಕ್ರಮದ ಸಮತೋಲನ ತಪ್ಪಿ ಇನ್ನೊಂದು ಕೀತದ, ಕ್ಷುದ್ರ ಪ್ರಾಣಿಯು ಸಂಖ್ಯೆ ಹೆಚ್ಚುತ್ತದೆ. ಉದಾಹರಣೆಗೆ ಹಾವನ್ನು ಕೊಲ್ಲುವುದರಿಂದ ಇಲಿಗಳ ಸಂಖ್ಯೆ ಹೆಚ್ಚುತ್ತದೆ. ಪಕ್ಷಿಗಳನ್ನು ಕೊಲ್ಲುವುದರಿಂದ ವಿವಿಧ ಜಾತಿಯ ಕೀಟಗಳ ಸಂಖ್ಯೆ ವಿಪರೀತವಾಗುತ್ತದೆ. ಬೆಳೆದ ಬೆಳೆ, ಆಹಾರ ಪದಾರ್ಥ ಇತ್ಯಾದಿಗಳನ್ನೆಲ್ಲಾ ಅವು ಕಬಳಿಸಿ ನಾಶ ಮಾಡುತ್ತದೆ. ಇದರಿಂದಾಗಿ ಆಹಾರ ಸಮಸ್ಯೆ ಇಡೀ ಮನುಕುಲವನ್ನು ಸಂಕಷ್ಟಕ್ಕೀಡು ಮಾಡುತ್ತದೆ. ಇದೊಂದು ಉದಾಹರಣೆಯಷ್ಟೇ. ಇಂಥಹ ನೂರಾರು ಸಮಸ್ಯೆಯನ್ನು ಬೇಟೆ ಸೃಷ್ಟಿಸುತ್ತದೆ. ಮಾರಕ ರೋಗ ತರುವ ಸಾವಿರಾರು ಕ್ರಿಮಿ ಕೀಟಗಳಿಂದಾಗಿ ಮುಂದಿನ ದಿನಗಳು ಮನುಷ್ಯನ ಬದುಕಿಗೆ ಮಾರಕವಾಗುತ್ತದೆ.

ಬೇಟೆಯಿಂದಾಗಿ ಈಗಾಗಲೇ ಹುಲಿ, ಸಿಂಹ, ಚಿರತೆ ಇತ್ಯಾದಿಗಳನ್ನು ಚಿತ್ರಪಟದಲ್ಲಿ ನೋಡುವಂತಾಗಿದೆ. ಮುಂದಿನ ದಿನಗಳಲ್ಲಿ ಬೇಟೆಯು ಮನುಕುಲಕ್ಕೆ ಮಾರಕವಾಗುವುದರಲ್ಲಿ ಸಂದೇಹವಿಲ್ಲ. ಈಗಿನ ದಿನಗಳಲ್ಲಿ ನಾವೆಲ್ಲ ಹುಲಿ, ಸಿಂಹ, ಚಿರತೆ, ಗುಬ್ಬಿ ಇತ್ಯಾದಿ ಪ್ರಾಣಿ ಪಕ್ಷಿಗಳನ್ನು ಕಾಡಿನಲ್ಲಿ ಅಲ್ಲದಿದ್ದರೂ ಸಂಗ್ರಹಾಲಯದಲ್ಲಿರಲಿ ಚಿತ್ರ ಪಟದಲ್ಲಿ ನೋಡಲು ಸಾಧ್ಯವಾಗದು. ಅಂದರೆ ಕಲಾವಿದನಿಗೂ ನೋಡಲೂ ಪ್ರಾಣಿಗಳು ಇಲ್ಲವಾಗುತ್ತವೆ.

# ಗ್ರಂಥಋಣ


೧. ಅಂಬಳಿಕೆ ಹಿರಿಯಣ್ಣ, ೧೯೭೮, ಮಲೆನಾಡ ಜನಪದ ಸಂಪ್ರದಾಯಗಳು, ಮೈಸೂರು, ಪುಸ್ತಕ ಚಿಲುಮೆ.

೨. ಅಂಬಳಿಕೆ ಹಿರಿಯಣ್ಣ, ೧೯೯೯, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರಕಾರ.

೩. ಐನಂಡ ಎಂ. ಧನು, ೨೦೦೦, ಕೊಡಗಿನಲ್ಲಿ ಪ್ರಾಣಿ ಬೇಟೆ (ಗ್ರಾಮೀಣ ಬೇಟೆಗಳು, ಸಂ. ದೇವೇಂದ್ರಕುಮಾರ ಹಕಾರಿ), ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರಕಾರ.

೪. ಕಡಿದಾಳು ಎಸ್. ರಾಮಪ್ಪಗೌಡ, ೧೯೯೮, ಮಲೆನಾಡಿನ ಶ್ರೀ ವೈಷ್ಣವ ನಾಮಧಾರಿಗೌಡ ಸಂಸ್ಕೃತಿ, ತೀರ್ಥಹಳ್ಳಿ ತಾಲೂಕು ಒಕ್ಕಲಿಗರ ಸಂಘ (ರಿ), ತೀರ್ಥಹಳ್ಳಿ.

೫. ಕೆದಂಬಾಡಿ ಜತ್ತಪ್ಪ ರೈ ಪಣಾಜೆ, ೧೯೭೮, ಬೇಟೆಯ ನೆನಪುಗಳು ಪುತ್ತೂರು, ಕನ್ನಡ ಸಂಘ.

೬. ಕೆದಂಬಾಡಿ ಜತ್ತಪ್ಪ ರೈ ಪಣಾಜೆ, ೧೯೭೯, ಈಡೊಂದು ಹುಲಿಯೆರಡು, ಮಂಗಳೂರು ಕೆದಂಬಾಡಿ ಜತ್ತಪ್ಪ ರೈ ಸನ್ಮಾನ ಸಮಿತಿ.

೭. ಕೆದಂಬಾಡಿ ಜತ್ತಪ್ಪ ರೈ ಪಣಾಜೆ, ೧೯೮೨, ಬೇಟೆಯ ಉರುಳು, ಮಂಗಳೂರು ಭಾರದ್ವಾಜ ಪ್ರಕಾಶನ.

೮. ಗೋವಿಂದರಾಜು. ಟಿ. ೧೯೯೬, ಸ್ಥಿತ್ಯಂತರದ ಬದುಕಿನಲ್ಲಿ ಬದುಕಿನಲ್ಲಿ ಬೇಟೆಯ ಸಂಸ್ಕೃತಿ (ಹೊಯ್ಸಳ ಸಂಪುಟ ಸಂ. ಮಳಲಿ ವಸಂತಕುಮಾರ) ಹಾಸನ, ಸ್ವಾಗತ ಸಮಿತಿ, ಅಖಿಲ ಭಾರತ ೬೫ನೇ ಕನ್ನಡ ಸಾಹಿತ್ಯ ಸಮ್ಮೇಳನ.

೯. ನರೇಂದ್ರ ರೈ ದೇರ್ಲ, ೧೯೯೫, ಕನ್ನಡದಲ್ಲಿ ಬೇಟೆ ಸಾಹಿತ್ಯ, ಕರ್ನಾಟಕ ಸಂಘ, ಪುತ್ತೂರು.

೧೦. ಪ್ರಕಾಶ್.ಎಂ.ಎಸ್., ೨೦೦೦, 'ಬಯಲು ಸೀಮೆಯಲ್ಲಿ ಪ್ರಾಣಿ ಬೇಟೆ' (ಗ್ರಾಮೀಣ ಬೇಟೆಗಳು, ಸಂ. ದೇವೇಂದ್ರ ಕುಮಾರ ಹಕಾರಿ), ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ ಕರ್ನಾಟಕ ಸರಕಾರ.

೧೧. ರಮೇಶ್. ಸ.ಚಿ., ೨೦೦೧, ಬೇಟೆ ಸಾಂಸ್ಕೃತಿಕ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೨. ರಾಮಣ್ಣ. ಯು.ಎಸ್., ೨೦೦೦, ಮಲೆನಾಡಿನಲ್ಲಿ ಪ್ರಾಣಿ ಬೇಟೆ (ಗ್ರಾಮೀಣ ಬೇಟೆಗಳು ಸಂ. ದೇವೇಂದ್ರ ಕುಮಾರ ಹಕಾರಿ), ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರಕಾರ.

೧೩. ವಿವೇಕ ರೈ.ಬಿ.ಎ., ೧೯೮೪, ಬೇಟೆ ಜಾನಪದ (ವಿಶಿಷ್ಟ ಜಾನಪದ ವಿಚಾರ ಸಂಕಿರಣದ ಪ್ರಬಂಧಗಳು ಸಂ. ಎಚ್.ಜೆ .ಲಕ್ಕಪ್ಪಗೌಡ), ಬಿ.ಆರ್. ಪ್ರಾಜೆಕ್ಟ್ ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ.

೧೪. Allen. R.E. 1990, **The Consise Oxford Dictionary of Current English,** Delhi, Oxford University.

೧೫. Children’s Britannica, 1992, **Encyclopaedia Britannica,** Vol. No. 9 Chicago Inc.

೧೬. Merit Students Encyclopaedia, 1990, Vol. No. 9. New York, Macmillan Educational Company.

೧೭. New Encyclopaedia Britannica, 1992, Vol. No. 6, **Chicago Encyclopaedia Britannica Inc.**